ದೆಹಲಿ ಕರ್ನಾಟಕ ಸಂಘದ

# ಅಭಿಮತ



ಏಪ್ರಿಲ್ 2023
ಬೆಲೆ ರೂ. 01/-

"ಬಾರಿಸು ಕನ್ನಡ ಡಿಂಡಿಮವ" ದೆಹಲಿ ಕರ್ನಾಟಕ ಸಂಘದ ಐತಿಹಾಸಿಕ ಅಮೃತ ಮಹೋತ್ಸವಕ್ಕೆ "ನಗಾರಿ" ಬಾರಿಸುವ ಮೂಲಕ ಚಾಲನೆ ನೀಡಿದ ವಿಶ್ವನಾಯಕ ಪ್ರಧಾನಿ ನರೇಂದ್ರ ಮೋದಿ




ಅಮೃತ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ "ಸಾಹಿತ್ಯ ಸಂವಾದ" ಕಾರ್ಯಕ್ರಮವನ್ನು ಯಶಸ್ಸುಗೊಳಿಸಿದ ಸಾಹಿತಿ ಗಣ್ಯರೊಂದಿಗೆ, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಹಾಗೂ ಸದಸ್ಯರು

# ಅಮೃತ ಮಹೋತ್ಸವ ಸಮಾರಂಭದ ಪ್ರಯುಕ್ತ ಏರ್ಪಡಿಸಿದ

## "ಸಾಹಿತ್ಯ ಸಂವಾದ" ಗೋಷ್ಠಿಯಲ್ಲಿ ಭಾಗವಹಿಸಿದ ಸಾಹಿತಿಗಳು ಮತ್ತು

## ಗಣ್ಯರಿಗೆ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಮತ್ತು ಸದಸ್ಯರು ಗೌರವ ಸಮರ್ಪಣೆ ಮಾಡುತ್ತಿರುವುದು




ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್



ಕನ್ನಡದ ಖ್ಯಾತಕವಿ ಡಾ. ದೊಡ್ಡರಂಗೇ ಗೌಡ




ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ,
ಸುಪ್ರಸಿದ್ಧ ಚಲನಚಿತ್ರ ನಿರ್ದೇಶಕ ಶ್ರೀ ಟಿ.ಎಸ್. ನಾಗಾಭರಣ




ಹಿರಿಯ ಕವಿ, ಖ್ಯಾತ ಸಾಹಿತಿ
ಪ್ರೊ. ಎಚ್.ಎಸ್. ಶಿವಪ್ರಕಾಶ್




ಚಿಂತಕರು, ಲೇಖಕರು ಶ್ರೀ ಕೆ.ವೈ. ನಾರಾಯಣ ಸ್ವಾಮಿ




ಮಹಾಕವಯಿತ್ರಿ ಡಾ. ಲತಾರಾಜಶೇಖರ್




ಕನ್ನಡದ ಖ್ಯಾತ ನಗೆ ಬರಹಗಾರ
ಶ್ರೀ ಎಂ.ಎಸ್. ನರಸಿಂಹ ಮೂರ್ತಿ




ಖ್ಯಾತ ಕವಿ, ಚಿಂತಕ
ಪ್ರೊ. ಕೆ.ಈ. ರಾಧಾಕೃಷ್ಣ




ಪ್ರಾಧ್ಯಾಪಕಿ, ಖ್ಯಾತ ಲೇಖಕಿ
ಡಾ. ಶೈಲಜಾ ಸಿ.ವಿ.

# ಅಭಿಮತ

ಸಂಪುಟ 33 । ಸಂಚಿಕೆ 7

ಏಪ್ರಿಲ್ 2023



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ

ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳಿ ಸದಸ್ಯರು

ಕೆ.ಎಸ್. ಮೂರ್ತಿ

ಯಲ್ಲಾಲಿಂಗ ಕೊಪ್ಪದ

ತಿಮ್ಮಪ್ಪ ಜಿ.ಆರ್.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು

ಸಿ.ಎಂ. ನಾಗರಾಜ

ಉಪಾಧ್ಯಕ್ಷರು

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ

ಆರ್. ರೇಣುಕುಮಾರ್

ಕೋಶಾಧಿಕಾರಿ

ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು

ಬಿ. ನಾರಾಯಣ

ಸುಮಿತಾ ಮುರಗೋಡ

ಸಮಿತಿ ಸದಸ್ಯರು

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳಿ

ಸಂಜೀವ ದೇಶಪಾಂಡೆ

ಐ. ಶಂಭುಲಿಂಗಪ್ಪ


## ಸಂಪಾದಕೀಯ

# ಕನ್ನಡ ಭಾಷೆ ಸಾಹಿತ್ಯ ಕುರಿತ ಜಾಗತಿಕ ಮಟ್ಟದ ಚರ್ಚೆಗೆ ವೇದಿಕೆ ಕಲ್ಪಿಸಲು ಕನ್ನಡೇತರರಿಗೆ ಅರಿವು ಮೂಡಿಸುವುದು ಮುಖ್ಯ

ಬಂಧುಗಳೇ, ನಮ್ಮ ದೆಹಲಿ ಕರ್ನಾಟಕ ಸಂಘದ ಐತಿಹಾಸಿಕ ಅಮೃತ ಮಹೋತ್ಸವ ಸಮಾರಂಭದಲ್ಲಿ ನಮ್ಮ ನೆಚ್ಚಿನ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ 'ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ...' ಎಂಬ ಸಾಲುಗಳು ಸಮಸ್ತ ಕನ್ನಡಿಗರ ಮನಸ್ಸಿನಲ್ಲಿ ಭಾಷೆ ಮತ್ತು ಸಂಸ್ಕೃತಿಯ ಬಗೆಗೆ ನಮ್ಮ ಅಭಿಮಾನವನ್ನು ನೂರ್ಮಡಿಗೊಳಿಸಿವೆ. ಜೊತೆಗೆ ನಮ್ಮ ಭಾಷೆಯ ಏಳಿಗೆಗಾಗಿ ನಾವೆಲ್ಲ ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕಾದ ಅಗತ್ಯವನ್ನು ಪ್ರಧಾನಮಂತ್ರಿಯವರು ಒತ್ತಿ ಹೇಳಿದ್ದಾರೆ.

ಇಂದು ಜಾಗತಿಕ ಮಟ್ಟದಲ್ಲಿ ಜೀವ ವೈವಿಧ್ಯತೆಯ ಬಗ್ಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ. ಇದರ ಜೊತೆಗೇ ಭಾಷಾ ವೈವಿಧ್ಯತೆಯ ಕುರಿತು ಗಮನ ಸೆಳೆಯಬೇಕಾದ ಜರೂರು ಕೂಡ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಪರಿಸರದಲ್ಲಿನ ಸಸ್ಯ ಹಾಗೂ ಇತರ ಜೀವ ಪ್ರಭೇಧಗಳು ಮತ್ತು ಅವುಗಳ ಸಂರಕ್ಷಣೆಯ ಅಗತ್ಯ, ಮಹತ್ವ, ಕೈಗೊಳ್ಳಬೇಕಾದ ಕ್ರಮಗಳ ಕುರಿತ ಚರ್ಚೆಯಂತೆಯೇ ಈ ವಿವಿಧತೆಗೂ ಮಾನವ ಸಮಾಜದಲ್ಲಿನ ಸಾಂಸ್ಕೃತಿಕ ಜೀವನಕ್ಕೂ ಹತ್ತಿರದ ಸಂಬಂಧ ಇರುವುದನ್ನು ಸಂಶೋಧಕರು ಇತ್ತೀಚಿನ ವರ್ಷಗಳಲ್ಲಿ ಪತ್ತೆ ಹಚ್ಚಿದ್ದಾರೆ.

ಎಲ್ಲಿ ಅಪಾರವಾದ ಜೀವ ವೈವಿಧ್ಯತೆ ಇದೆಯೋ, ಅಲ್ಲಿ ಭಾಷಾ ವೈವಿಧ್ಯತೆಯೂ ಇದೆ. ಸಸ್ಯ ಪ್ರಬೇಧಗಳು ನಶಿಸಿ ಹೊಸದಕ್ಕೆ ಎಡೆ ಮಾಡಿಕೊಡುವುದು ಒಂದು ನೈಸರ್ಗಿಕ ಪ್ರಕ್ರಿಯೆ. ಆದರೆ ಭಾಷೆಯ ಅಳಿವು ಒಂದು ಸಾಮಾನ್ಯ ಸಹಜ ಪ್ರಕ್ರಿಯೆ ಅಲ್ಲ. 'ಕ್ಲಾಡ್ ಹಗೆಗೆ' ಎಂಬ ಭಾಷಾ ತಜ್ಞರ ಪ್ರಕಾರ ಭಾಷೆ ಎಂದರೆ ಕೇವಲ ಶಬ್ದ ಭಂಡಾರವಲ್ಲ. ಅದೊಂದು ಜೀವಂತವಾಗಿರುವ, ಉಸಿರಾಡುವ ಜೀವವಿದ್ದಂತೆ. ಈ ಹಿನ್ನೆಲೆಯಲ್ಲಿ ಸಂಸ್ಕೃತಿಯ ಅಂತಸ್ಸತ್ವವಾಗಿರುವ ಭಾಷೆಯೊಂದು ನಶಿಸಿದರೆ ಆ ಸಂಸ್ಕೃತಿಯೇ ನಶಿಸಿದಂತೆ ಎಂಬ ಕರಾಳ ಸತ್ಯವನ್ನು ನಾವೆಲ್ಲರೂ ಮನಗಾಣಬೇಕಿದೆ.

ಭಾಷೆಗೂ ಅದನ್ನು ಜೀವಂತವಾಗಿಡುವ ಜನರಿಗೂ ಹತ್ತಿರದ ನಂಟು ಮಾತ್ರವಲ್ಲ ಅದೇ ಸಂಸ್ಕೃತಿಯ ಅಡಿಪಾಯ, ಆಧಾರ ಸ್ಥಂಭ. ಒಂದು ಸಂಸ್ಕೃತಿಯನ್ನು ಬೇರು ಸಹಿತ ನಾಶಪಡಿಸುವ ಪ್ರಕ್ರಿಯೆ ಪಾರಂಭವಾಗುವುದೇ ಭಾಷೆಯ ಅಳಿವಿನಿಂದ. ಜಗತ್ತಿನಲ್ಲಿ ಇಂದು 3000 ಭಾಷೆಗಳು ಅವಸಾನದ ಅಂಚಿನಲ್ಲಿವೆ. ಕೆಲವು ಭಾಷೆಗಳನ್ನು ಮಾತನಾಡುವವರು ಕೇವಲ ಬೆರಳೆಣಿಕೆಯಷ್ಟು ಮಾತ್ರ ಉಳಿದರೆ ಅಂತಹ ಭಾಷೆಯು ಅವಸಾನ ಅಂಚಿನಲ್ಲಿದೆ ಎಂಬುದಾಗಿ ಭಾಷಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಭಾಷೆಯನ್ನು ಮಾತನಾಡುವ ಜನಾಂಗದ ಕೊನೆಯ ವ್ಯಕ್ತಿಯ ಸಾವಿನ ನಂತರ ಆ ಭಾಷೆ ನಶಿಸಿ ಹೋಗುತ್ತದೆ. ವಿಶ್ವ ಸಂಸ್ಥೆಯ ಶಿಕ್ಷಣ ಹಾಗೂ ಸಾಂಸ್ಕೃತಿಕ ಘಟಕದ ಪ್ರಕಾರ ಜಗತ್ತಿನಲ್ಲಿ ಅರ್ಧದಷ್ಟು ಭಾಷೆಗಳು ಅವಸಾನದ ಅಂಚಿನಲ್ಲಿವೆ.

ಇಂದಿನ ಕನ್ನಡದ ಸ್ಥಿತಿಗತಿ ಹಿಂದೆಂದಿಗಿಂತಲೂ ಆತಂಕಕಾರಿಯಾಗಿದೆ. ಕರ್ನಾಟಕದಲ್ಲಿಯೇ ಕನ್ನಡ ಶಾಲೆಗಳು ಮುಚ್ಚುತ್ತಿರುವುದರ ಪರಿಣಾಮ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಕನ್ನಡವನ್ನು ಮಕ್ಕಳು ಕಲಿಯಲು ಅವಕಾಶ ತಪ್ಪಿ ಹೋಗುತ್ತಿದೆ. ಜಾಗತೀಕರಣದ ಪರಿಣಾಮ ಇಂಗ್ಲಿಷ್ ಭಾಷೆ ಮಹತ್ವ ಪಡೆದಿರುವುದರಿಂದ ಅದನ್ನು ಭಾಷೆ ಮಾತ್ರವಾಗಿ ಕಲಿಸದೆ, ಕಲಿಕೆಯ ಮಾಧ್ಯಮವಾಗಿ ಮಾಡಿಕೊಳ್ಳಲಾಗಿದೆ. ಹೀಗೆ ಇಂಗ್ಲಿಷ್ ಭಾಷೆಯು ಶಿಕ್ಷಣದ ಮಾಧ್ಯಮವಾಗಿ ಬಳಕೆಯಾಗುತ್ತಿರುವ ಈ ದಿನಗಳಲ್ಲಿ ನಮ್ಮ ನೆಲದ ಭಾಷೆಯಾದ ಕನ್ನಡವನ್ನು ಶಾಲೆಗಳಲ್ಲಿ ಮಕ್ಕಳಿಗೆ ಕಲಿಕೆಯ ಮಾಧ್ಯಮವಾಗಿ ಕಲಿಸದೆ ಒಂದು 'ಭಾಷೆ'ಯಾಗಿ ಮಾತ್ರ ಕಲಿಸುವ ದುರಂತ ಎದುರಾಗಿದೆ. ಯಾವ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಬಳಸಿಕೊಳ್ಳಬೇಕೋ ಅದನ್ನು ಕೇವಲ ಭಾಷೆಯಾಗಿ ಮಕ್ಕಳು ಶಾಲೆಗಳಲ್ಲಿ ಕಲಿಯುತ್ತಿರುವರು. ಭಾಷೆಯಾಗಿ ಕಲಿಯುವ ಅಗತ್ಯವಿರುವ ಇಂಗ್ಲಿಷ್ ಇಂದು ಶಿಕ್ಷಣದ ಮಾಧ್ಯಮವಾಗಿ ಬಹುಮುಖ್ಯ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಅಂದರೆ ನಾವಿಂದು ಏಳೂವರೆ ಕೋಟಿ ಕನ್ನಡಿಗರು ಮಾತನಾಡುವ ಕನ್ನಡ ಭಾಷೆಯ ಮೇಲೆ ಇತರ ಭಾಷೆಗಳ ಆಕ್ರಮಣ, ಹಾಗೂ ಇದರಿಂದ ಕನ್ನಡದ ಉಳಿವಿಗೆ ಇರುವ ಅಪಾಯದ ಬಗ್ಗೆ ಚಿಂತನೆ ನಡೆಸಿ ನಮ್ಮ ತಾಯ್ನುಡಿಯ ಉಳಿವು, ಬೆಳವಣಿಗೆಗೆ ಪೂರಕ ಯೋಜನೆಗಳನ್ನು ವ್ಯಕ್ತಿಗಳು, ಸಂಸ್ಥೆಗಳು, ಮತ್ತು ಆಡಳಿತಾರೂಢ ಸರ್ಕಾರಗಳು, ಹೆಚ್ಚು ಹೆಚ್ಚು ಜಾಗರೂಕರಾಗಿ ಕೆಲಸ ಮಾಡಬೇಕಿದೆ. ಯಾವುದೇ ಒಂದು ಭಾಷೆಯನ್ನು ಎಷ್ಟು ಸಮರ್ಥವಾಗಿ ಬಳಸಿಕೊಳ್ಳಲಾಗಿದೆ ಎಂಬುವುದರ ಆಧಾರದ ಮೇಲೆ ಅದು ಎಷ್ಟು ಗಟ್ಟಿಯಾಗಿ ತಳವೂರಿದೆ ಎನ್ನುವುದು ತಿಳಿಯುತ್ತದೆ. ಈ ದೃಷ್ಟಿಯಿಂದ ನೋಡಿದರೆ ಅಮೋಘವರ್ಷ, ನೃಪತುಂಗನ ಕಾಲದಿಂದಲೂ ಕನ್ನಡ ಭಾಷೆಯನ್ನು ಈ ನಾಡಿನಲ್ಲಿ ಸಮೃದ್ಧವಾಗಿ ಬಳಸಿಕೊಳ್ಳಲಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಕನ್ನಡದ ಆಳರಸರು ಮತ್ತು ಕನ್ನಡ ಜನರು ನೀಡಿದ ಪ್ರೋತ್ಸಾಹದಿಂದ ಕನ್ನಡದಲ್ಲಿ ಸಾಹಿತ್ಯದ ಸೃಜನಶೀಲತೆಯ ಫಸಲು ಸಮೃದ್ಧವಾಗಿ ಬೆಳೆಯಲು ಸಾಧ್ಯವಾಯಿತು. ಅಮೋಘವರ್ಷ, ನೃಪತುಂಗನ ಕಾಲದಿಂದ ಕುವೆಂಪು, ಕಾರಂತ, ಬೇಂದ್ರೆ ಅಡಿಗರು, ಅನಂತಮೂರ್ತಿ, ಸಿದ್ದಲಿಂಗಯ್ಯ ಅವರೂ ಸೇರಿದಂತೆ ಹಳೆಗನ್ನಡ, ಹೊಸಗನ್ನಡ, ನವ್ಯ, ನವೋದಯ, ದಲಿತ, ಬಂಡಾಯ ಹೀಗೆ ವಿವಿಧ ಕಾಲಘಟ್ಟದಲ್ಲಿ ಕನ್ನಡ ಭಾಷೆ ಅನೇಕ ಅಗ್ನಿದಿವ್ಯಗಳನ್ನು ದಾಟಿ ತನ್ನತನ ಮತ್ತು ಸಮೃದ್ಧತೆಯನ್ನು ಉಳಿಸಿಕೊಂಡು ಬಂದಿದೆ. ಕನ್ನಡ ಭಾಷೆಯ ಗತವೈಭವವನ್ನು ಮತ್ತೆ ಮರಳಿ ತರುವ ಕೆಲಸ ಇವತ್ತಿನ ತುರ್ತು ಅಗತ್ಯಗಳಲ್ಲೊಂದು. ಈ ದಿಸೆಯಲ್ಲಿ ಕನ್ನಡದ ಬಗೆಗೆ ಕನ್ನಡಿಗರಿಗೂ ಮತ್ತು ಕನ್ನಡೇತರರಿಗೂ ಆಸಕ್ತಿ ಅಭಿಮಾನ ಮೂಡಿಸುವ ಕೆಲಸ ಆಗಬೇಕಿದೆ.

ಈ ನಿಟ್ಟಿನಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಸತ್ವವನ್ನು ಅನ್ಯ ಭಾಷಿಕ ಜನರಿಗೆ ತಲುಪಿಸುವ ಕೆಲಸವನ್ನು ಹಿರಿಯ ಸಂಶೋಧಕ, ಖ್ಯಾತ ಚಿಂತಕ ಡಾ ಹಂಪ ನಾಗರಾಜಯ್ಯ ಅವರು ಕರ್ನಾಟಕದ ಅಭಿಜಾತ ಸಾಹಿತ್ಯದ ಇಂದ್ರಚಾಪ ಕೃತಿಯ (Spectrum of Classical Literature in Karnataka) ಐದು ಸಂಪುಟಗಳಲ್ಲಿ ಸಮರ್ಥವಾಗಿ ಮಾಡಿದ್ದಾರೆ. ಈ ಕುರಿತು ದೆಹಲಿ ಕರ್ನಾಟಕ ಸಂಘದಲ್ಲಿ ಡಾ. ಹಂಪನಾ ಅವರ ಗೌರವ ಉಪಸ್ಥಿತಿಯಲ್ಲಿ ಅವರ ಕುರಿತ ಏರ್ಪಡಿಸಿದ್ದ ಅನುಸಂಧಾನ ಕಾರ್ಯಕ್ರಮದಲ್ಲಿ ಮಂಡಿಸಿದ ನಾಡಿನ ವಿದ್ವಜ್ಜನರಾದ ಡಾ. ಎಲ್. ಹನುಮಂತಯ್ಯ, ಪ್ರೊ. ರಾಜೇಂದ್ರ ಚೆನ್ನಿ, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಎಚ್.ಎಸ್. ಶಿವಪ್ರಕಾಶ್ ಅವರುಗಳ ವಿಚಾರಧಾರೆಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ. ಕನ್ನಡ ಭಾಷೆ ಸಾಹಿತ್ಯ ಕುರಿತ ಜಾಗತಿಕ ಮಟ್ಟದ ಚರ್ಚೆಗೆ ವೇದಿಕೆ ಕಲ್ಪಿಸಲು ಕನ್ನಡೇತರರಿಗೆ ಅರಿವು ಮೂಡಿಸುವಲ್ಲಿ ಈ ಕೃತಿ ಒಂದು ಮೈಲಿಗಲ್ಲು ಎನ್ನಬಹುದಾದ ಸಾಧನೆ ಡಾ. ಹಂಪ ನಾಗರಾಜಯ್ಯ ಅವರದ್ದು ಎಂಬುದು ಹೆಮ್ಮೆಯ ಸಂಗತಿ. ಹಾಗೆಯೆ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಇನ್ನಷ್ಟು ನೆನಪುಗಳನ್ನು ದಾಖಲಿಸುತ್ತಾ, ಈ ಸಂಚಿಕೆಯನ್ನು ತಮ್ಮ ಕೈಗಿಡುತ್ತಿದ್ದೇವೆ. ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

## ಅಧ್ಯಕ್ಷರ ನುಡಿ



ಆತ್ಮೀಯ ಕನ್ನಡ ಬಂಧುಗಳೇ,

ಕಳೆದ ಫೆಬ್ರವರಿ 25 ಮತ್ತು 26 ರಂದು ಸಂಪನ್ನಗೊಂಡ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಐತಿಹಾಸಿಕ ಕಾರ್ಯಕ್ರಮ ಇತಿಹಾಸವಾಗಿ ಉಳಿಯಿತು.

ಈ ಕಾರ್ಯಕ್ರಮಕ್ಕೆ ದುಡಿದಂತಹ, ಸಹಕಾರ ನೀಡಿದಂತಹ ಎಲ್ಲಾ ಮಹನೀಯರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಒಂದು ವರ್ಷದ ಹಿಂದೆ ಕಂಡಂತ ಕನಸು ನನಸಾಗಿದೆ. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ವರ್ಷದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಜಿಗಳ ದಿವ್ಯಸಾನಿಧ್ಯದಲ್ಲಿ ಉದ್ಘಾಟನೆಯೊಂದಿಗೆ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾವಾರು ಸಾಂಸ್ಕೃತಿಕ ಉತ್ಸವದೊಂದಿಗೆ ಶುರುವಾಗಿ ಸತತವಾಗಿ ಪ್ರತಿ ತಿಂಗಳು ಒಂದು ಎರಡು ಕಾರ್ಯಕ್ರಮಗಳು ಆಯೋಜನೆಗೊಂಡು ರಾಜ್ಯದ ಮೂವತ್ತೊಂದು ಜಿಲ್ಲೆಯ ಕರ್ನಾಟಕದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಹಿತ್ಯ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ನಡೆದಿವೆ.

ಈ ಕಾರ್ಯಕ್ರಮಗಳಿಗೆ ಕರ್ನಾಟಕ ಸಂಘಕ್ಕೆ ಹೊರೆಯಾಗದೆ, ಕರ್ನಾಟಕ ಸಂಘದಿಂದ ಒಂದು ರೂಪಾಯಿ ಸಹ ತೆಗೆಯದೆ ಎಲ್ಲಾ ನನ್ನ ಮಿತ್ರ ಬಂಧು ಬಳಗದವರೊಂದಿಗೆ ಸಹಕಾರವನ್ನು ಕೇಳಿ ಸುಮಾರು 1,250 ಕಲಾವಿದರನ್ನು ಕರೆತರಿಸಿ ಪೂರ್ತಿ ವರ್ಷ ಕಾರ್ಯಕ್ರಮಗಳನ್ನು ಸಂಘದಲ್ಲಿ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ. ಜೊತೆಗೆ ಸಮಾರೋಪ ಕಾರ್ಯಕ್ರಮಕ್ಕೆ ಮಾನ್ಯ ಪ್ರಧಾನಮಂತ್ರಿಗಳು ಬಂದು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಬೇಕು ಎಂಬುವ ನನ್ನ ಕನಸು ಸಹಾ ನನಸಾಗಿದೆ. ಐತಿಹಾಸಿಕ ಈ ಕಾರ್ಯಕ್ರಮಕ್ಕೆ ಅನೇಕ ಗಣ್ಯಾತಿ ಗಣ್ಯರು, ಮಹನೀಯರು, ಸಾವಿರಾರು ಕನ್ನಡಿಗರು ನಮ್ಮ ಕರ್ನಾಟಕ ಸಂಘಕ್ಕೆ ದುಡಿದಿದ್ದಾರೆ.

ಬಂಧುಗಳೇ, ಈ 75ನೇ ವರ್ಷದ ಅಮೃತವರ್ಷ ಇತಿಹಾಸದಲ್ಲಿ ಉಳಿಯಬೇಕಾದರೆ ಮಾನ್ಯ ಪ್ರಧಾನಮಂತ್ರಿಗಳು ಬಂದು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಕಾರ್ಯಕ್ರಮಕ್ಕೆ ಮೆರುಗು ತರಬೇಕೆಂಬುದು ನಮ್ಮೆಲ್ಲರ ಆಶಯವಾಗಿತ್ತು. ಈ ಪ್ರಯತ್ನದಲ್ಲಿ ನಮ್ಮ ಪ್ರಸ್ತುತ ಕಾರ್ಯಕಾರಿ ಸಮಿತಿಯು ಯಶಸ್ಸನ್ನು ಕಂಡಿದೆ. ಜೊತೆಗೆ ಮಾನ್ಯ ಪ್ರಧಾನಮಂತ್ರಿಗಳು ಸರಿಸುಮಾರು ಎರಡು ಗಂಟೆ ಹತ್ತು ನಿಮಿಷ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕರ್ನಾಟಕದಿಂದ ಬಂದಂತ ಸಾವಿರಾರು ಕಲಾವಿದರ ಪ್ರದರ್ಶನವನ್ನು ವೀಕ್ಷಿಸಿ ಪ್ರಶಂಶಿಸಿದ್ದಾರೆ. ನಾಡಿನ ಖ್ಯಾತ ಕವಿಗಳು, ಸಾಹಿತಿಗಳು, ವಿದ್ವಾಂಸರು, ಸಾವಿರಾರು ಕಲಾವಿದರು, ಸ್ಥಳೀಯ, ಹೊರನಾಡ, ಹೊರದೇಶಗಳ ಕನ್ನಡಿಗರು ಭಾಗಿಯಾದ ಈ ಕಾರ್ಯಕ್ರಮವು ಅಭೂತಪೂರ್ವ ಯಶಸ್ಸು ಕಂಡಿದೆ. ಮಾನ್ಯ ಪ್ರಧಾನಮಂತ್ರಿಗಳು ರಾಷ್ಟ್ರಕವಿ ಕುವೆಂಪುರವರನ್ನ, ಅವರ ಕವಿತೆಯನ್ನು ಹಾಡಿ ಹೊಗಳಿದ್ದಾರೆ ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಎಂಬ ಸಾಲುಗಳನ್ನು ತಮ್ಮ ಭಾಷಣದಲ್ಲಿ ವ್ಯಾಖ್ಯಾನಿಸಿದ್ದಾರೆ ಮತ್ತು 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು' ಎಂಬ ಮಾತುಗಳನ್ನು ಒತ್ತಿ ಹೇಳಿದ್ದಾರೆ. ಇವತ್ತು ನಾವು ಒಂದು ಭಾರತ ಶ್ರೇಷ್ಠ ಭಾರತ ಕನಸನ್ನ ಕಾಣುತ್ತಿದ್ದೇವೆ. ಅದನ್ನು ನಮ್ಮ ರಾಷ್ಟ್ರಕವಿ ಕುವೆಂಪುರವರು ಅವರ ಕವನದಲ್ಲಿಯೇ ಬರೆದಿದ್ದಾರೆ ಎಂಬುದು ನಮಗೆ ಹೆಮ್ಮೆಯ ವಿಷಯ ಎಂದು ಮಾನ್ಯ ಪ್ರಧಾನಮಂತ್ರಿಗಳು ಕವಿಗಳನ್ನು ಹೊಗಳಿದ್ದಾರೆ. ಜೊತೆಗೆ ಕನ್ನಡದವರನ್ನು ಕನ್ನಡದವರ ಜೊತೆ ಕನ್ನಡೇತರರ ಕುಟುಂಬಗಳನ್ನ ತಮ್ಮ ಕಾರ್ಯಕ್ರಮಕ್ಕೆ ಕರೆತಂದು ಕನ್ನಡವನ್ನು ಕಲಿಸಿ ಕನ್ನಡವನ್ನು ಬೆಳೆಸಿ ಕನ್ನಡದವರು ಸಜ್ಜನರು ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಮಾನನೀಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಸಮಸ್ತ ಏಳು ಕೋಟಿ ಕನ್ನಡ ಜನತೆಯ ಪರವಾಗಿ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಜೊತೆಗೆ ಅವರು ನೀಡಿರುವ ಕೆಲವೊಂದು ಜವಾಬ್ದಾರಿಗಳು ನಮ್ಮ ಮೇಲೆ ತುಂಬಾ ಇವೆ. ಅದರಲ್ಲಿ ಮುಖ್ಯವಾಗಿ 75ನೇ ವರ್ಷದಲ್ಲಿ ನಾವು ಕಾಣಬೇಕಾದ ಇನ್ನು ಅನೇಕ ಕನಸುಗಳು ಮತ್ತೆ ಮುಂದಿನ 25 ವರ್ಷಗಳಲ್ಲಿ ಮಾಡಬೇಕಾದ ಕಾರ್ಯಗಳು ಐತಿಹಾಸಿಕವಾಗಿ ಉಳಿಯಬೇಕೆಂದು, ಸಂಘದ ಶತಮಾನೋತ್ಸವ ಆಚರಿಸುವ ಸಂಧರ್ಭದಲ್ಲಿ ಅಂದಿನ ಪೀಳಿಗೆಯವರು ಸ್ಮರಿಸುವಂತಹ ಕೆಲಸಗಳನ್ನು ಮಾಡಬೇಕೆಂದು ಕಿವಿ ಮಾತನ್ನ ಹೇಳಿದ್ದಾರೆ. ಅದನ್ನು ಮಾಡುವ, ಉಳಿಸುವ ಕಾರ್ಯ ನಮ್ಮದಾಗಿದೆ. ನಮ್ಮೆಲ್ಲರ ಹೊಣೆಗಾರಿಕೆ ಸಹ.

ನಮ್ಮ ದೆಹಲಿ ಕರ್ನಾಟಕ ಸಂಘದ 75ನೇ ಅಮೃತ ವರ್ಷದಲ್ಲಿ ಸಂಘಕ್ಕೆ ನೋಯಿಡಾ ಅಥವಾ ಗುರುಗ್ರಾಮ ಎಲ್ಲಾದರೂ ಒಂದು ಕಡೆ ಮತ್ತೊಂದು ಜಾಗವನ್ನು ತೆಗೆದುಕೊಳ್ಳಬೇಕೆಂದು, ಜೊತೆಗೆ ಕರ್ನಾಟಕದಿಂದ ಉನ್ನತ ಶಿಕ್ಷಣಕ್ಕೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದೆಹಲಿಗೆ ಬರುವ ಕನ್ನಡ ಮಕ್ಕಳಿಗೆ ಮತ್ತು ಇಲ್ಲಿನ ನಮ್ಮ ಸದಸ್ಯರ ಮಕ್ಕಳಿಗೆ ಉನ್ನತ ಶಿಕ್ಷಣಕೋಸ್ಕರ, ತರಬೇತಿ ಹಾಗು ವಸತಿ ನಿಲಯವನ್ನು ನಿರ್ಮಿಸಬೇಕು ಎಂಬುದು ಒಂದು ದೊಡ್ಡ ಸಂಕಲ್ಪ ಮತ್ತು ಜವಾಬ್ದಾರಿ ನಮ್ಮ ಮೇಲೆ ಇದೆ. ಜೊತೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಮುಂಬರುವ ದಿನಗಳಲ್ಲಿ ದಾಸೋಹ ಕಾರ್ಯಕ್ರಮವನ್ನು ಉಚಿತವಾಗಿ ಊಟದ ವ್ಯವಸ್ಥೆಯನ್ನೂ ಸಹ ಮಾಡಬೇಕೆಂಬ ಪ್ರಯತ್ನದಲ್ಲಿ ಇದ್ದೇನೆ. ಈ ಎಲ್ಲಾ ಯೋಜನೆಗಳನ್ನು ಸಫಲವಾಗಿ ಪೂರ್ಣಗೊಳಿಸಿ ಮುಂದೆ ಸಂಘದ ಸದಸ್ಯರಿಗೆ ಅನುಕೂಲವಾಗುವಂತಹ ಇನ್ನು ಅನೇಕ ಹೊಸ ಹೊಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಿದ್ದೇವೆ. ನಮ್ಮ ಈ ಎಲ್ಲ ಪ್ರಯತ್ನಗಳಲ್ಲಿ ನಿಮ್ಮೆಲ್ಲರ ಸಂಪೂರ್ಣ ಸಹಕಾರವಿರಲಿ.

ಆತ್ಮೀಯರೇ, ಪೂರ್ತಿ ವರ್ಷ ಈ ಅಮೃತ ಮಹೋತ್ಸವ ಕಾರ್ಯಕ್ರಮಗಳಿಗೆ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಸಾವಿರಾರು ಕಲಾವಿದರನ್ನು ಕರೆತರಿಸಿ ಅವರ ಖರ್ಚು ವೆಚ್ಚಗಳನ್ನು ಕರ್ನಾಟಕ ಸಂಘಕ್ಕೆ ಹೊರೆಯಾಗದೆ, ಎಲ್ಲವನ್ನೂ ಸಹ ಪ್ರಯೋಜನೆಯ, ದಾನಿಗಳ ಸಹಕಾರದ ಮುಖಾಂತರ ತಂದು ಕಾರ್ಯಕ್ರಮಗಳನ್ನ ಯಶಸ್ವಿಗೊಳಿಸಿದ್ದೇವೆ. ಜೊತೆಗೆ ಅಮೃತ ಮಹೋತ್ಸವದ ಸಮಾರೋಪ ಕಾರ್ಯಕ್ರಮಕ್ಕೆ ಸುಮಾರು ಮೂರು ಕೋಟಿ 75 ಲಕ್ಷವನ್ನು ತಂದು ಈ ಅಮೃತ ಮಹೋತ್ಸವ ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ನಮ್ಮ ಪ್ರಯತ್ನ ಸಫಲವಾಗಿದೆ. ಇಷ್ಟೊಂದು ಧನಸಹಾಯಕ್ಕೆ ನನಗೆ ಸಹಕಾರವಾಗಿ ನಿಂತ ನನ್ನ ಸ್ನೇಹಿತರಿಗೆ, ಬಂಧು ಬಳಗದವರಿಗೆ, ದೆಹಲಿ ಕನ್ನಡಿಗರಿಗೆ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳಿಗೆ ಅನಂತಾನಂತ ಧನ್ಯವಾದಗಳು.

ಬಂಧುಗಳೇ, ಇದೇ ಏಪ್ರಿಲ್ ತಿಂಗಳು 8 ಮತ್ತು 9ನೇ ತಾರೀಕು ದೆಹಲಿ ಎನ್.ಸಿ.ಆರ್.ನಲ್ಲಿರುವ ಕನ್ನಡಿಗರಿಗೆ, ಸಂಘದ ಸದಸ್ಯರಿಗೆ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜನೆ ಮಾಡಲಾಗಿದೆ. ಈ ಟೂರ್ನಮೆಂಟ್‌ನಲ್ಲಿ ದಾಖಲೆ 21 ತಂಡಗಳು ಭಾಗಿಯಾಗಲಿವೆ. ಈ ಎಲ್ಲಾ ತಂಡಗಳಿಗೆ ಈ ಬಾರಿ ವಿಶೇಷವಾಗಿ ಅಮೃತ ಮಹೋತ್ಸವದ ಅಡಿಯಲ್ಲಿ ಸಮವಸ್ತ್ರಗಳನ್ನು ಸಹ ನೀಡುತ್ತಿದ್ದೇವೆ. ಜೊತೆಗೆ, ವಿಶೇಷವಾದ ಪಿಕ್‌ನಿಕ್ ಕಾರ್ಯಕ್ರಮ ಆಯೋಜನೆ ಮಾಡುತ್ತಿದ್ದೇವೆ. ಈ ತಿಂಗಳು 16ನೇ ತಾರೀಕು ಭಾನುವಾರ ಹರಿದ್ವಾರ ಮತ್ತು ರಿಷಿಕೇಶ್‌ಗೆ ಒಂದು ದಿನದ ಪಿಕ್‌ನಿಕ್ ಹೋಗುತ್ತಿದ್ದೇವೆ. ಈ ಎರಡು ಕಾರ್ಯಕ್ರಮಗಳ ತಯಾರಿ ಬರದಿಂದ ನಡೆಯುತ್ತಿದೆ. ಆಯಾ ಉಪಸಮಿತಿಗಳು ಸಕ್ರಿಯವಾಗಿ ಕಾರ್ಯ ಪ್ರವೃತ್ತವಾಗಿವೆ. ನಮ್ಮ ಸಂಘದ ಎಲ್ಲಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗಿಯಾಗಿ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ, ಕ್ರಿಕೆಟ್ ಪಂದ್ಯಾವಳಿಯ ಮತ್ತು ಪಿಕ್‌ನಿಕ್‌ನ ಪ್ರಯೋಜನ ಪಡೆದುಕೊಳ್ಳುವಿರೆಂದು ನಾನು ಆಶಿಸುತ್ತೇನೆ.

ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮ ಮುಗಿದ ನಂತರ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಕಳೆದ ಮಾರ್ಚ್ ತಿಂಗಳು ಐದನೇ ತಾರೀಖು ನಡೆಸಿ ಮುಕ್ತಾಯ ಮಾಡಿದ್ದೇವೆ. ಸೌಹಾರ್ದಯುತ ವಾತಾವರಣದಲ್ಲಿ ನಡೆದ ಮಹಾಸಭೆಯಲ್ಲಿ ಎಲ್ಲ ವಿವರಗಳನ್ನು ಪಾರದರ್ಶಿಕವಾಗಿ ನೀಡಿದ್ದು ಲೆಕ್ಕಪತ್ರಗಳು ಸಹ ಪಾರದರ್ಶಕವಾಗಿ ಸಭೆಯಲ್ಲಿ ಅನುಮೋದನೆಗೊಂಡಿವೆ. ಮುಂಬರುವ ಇನ್ನೂ ಅನೇಕ ಕಾರ್ಯಕ್ರಮಗಳಿಗೆ ನಿಮ್ಮೆಲ್ಲರ ಸಕ್ರಿಯ ಭಾಗವಹಿಸುವಿಕೆ ಮತ್ತು ಸಲಹೆ ಸಹಕಾರಗಳು ಇರಲೆಂದು ನಾನು ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

***ಸಿ.ಎಂ. ನಾಗರಾಜ***
ಅಧ್ಯಕ್ಷರು

## ಮುನ್ನೋಟ

ಆತ್ಮೀಯ ಕನ್ನಡಿಗರೇ,

ಅಮೃತ ಮಹೋತ್ಸವ ಆಚರಣೆ ಹಾಗೂ ವಾರ್ಷಿಕ ಮಹಾಸಭೆಯಂತಹ ಬೋರ್ಡ್ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದ ಸಂಘ ಇದೀಗ ಹಾಲಿಡೇ ಮೂಡ್‌ಗೆ ಹೋಗುವ ಮೊದಲು, ಒಂದೆರಡು ಪ್ರಮುಖ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಲಿದೆ. ಒಂದು ವಾರ್ಷಿಕ ಕ್ರಿಕೆಟ್ ಟೂರ್ನಮೆಂಟ್ ಮತ್ತೊಂದು ಪಿಕ್‌ನಿಕ್. ಇದೇ ಏಪ್ರಿಲ್ 8 ಮತ್ತು 9 ಶನಿವಾರ, ಭಾನುವಾರ ನಡೆಯುವ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಈಗಾಗಲೇ 21 ತಂಡಗಳು ಬಂದಿದ್ದು, ಇದು ಒಂದು ವಿಶಿಷ್ಟವಾದ, ಯುವಕರನ್ನ ಸಂಘದತ್ತ ಸೆಳೆಯಬಲ್ಲಂಥ ಕಾರ್ಯವಾಗಲಿದೆ. ಎರಡನೇಯದಾಗಿ ಪಿಕ್‌ನಿಕ್ 16.04.2023 ರಂದು ಎಲ್ಲಾ ಕನ್ನಡಿಗರೂ ಸೇರಿ ಹರಿದ್ವಾರ–ರಿಷಿಕೇಶ್ ಪ್ರವಾಸದೊಂದಿಗೆ ಬೆಳಗಿನಿಂದ ರಾತ್ರಿಯವರೆಗೆ ಒಟ್ಟುಗೂಡಿ ಕಾಲ ಕಳೆಯುವ–ಮನರಂಜನೆಗೊಳ್ಳುವ ಅವಕಾಶ. ಈ ಎರಡೂ ಕಾರ್ಯಗಳೂ ಹೊಸ–ಹಳೆಯ–ಎಳೆಯ ಕನ್ನಡ ಮನಸ್ಸುಗಳನ್ನು ಸಂಘದತ್ತ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ನಾವೆಲ್ಲರೂ ಜೊತೆಗೂಡಿ ಮಾಡಬೇಕಾದ ಕರ್ತವ್ಯವಾಗಿದೆ.

ನಮ್ಮ ಕಾರ್ಯಕಾರಿ ಸಮಿತಿ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿದ್ದು, ಎರಡೂ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವವರಿದ್ದೇವೆ. ನಿಮ್ಮ ಸಹಕಾರ ಅತಿಮುಖ್ಯ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಸಂಘದ ಕಾವಲು ಸಮಿತಿಯ ನೂತನ ಸದಸ್ಯರುಗಳಿಗೆ ಅಭಿನಂದನೆ



2023–25 ನೇ ಸಾಲಿನ ಕಾವಲು ಸಮಿತಿಗೆ ಹಿಂದಿನ ವಾರ್ಷಿಕ ಮಹಾಸಭೆಯಲ್ಲಿ ಮರು ನಾಮಾಂಕಣಗೊಂಡ ಶ್ರೀ ಅನಂತರಾಮು ಅರಳಿ, ಹೊಸದಾಗಿ ಆಯ್ಕೆಯಾದ ಶ್ರೀ ಸಂಜೀವ ದೇಶಪಾಂಡೆ ಹಾಗೂ ಶ್ರೀ ಐ. ಶಂಭುಲಿಂಗಪ್ಪನವರು ದಿನಾಂಕ 31.03.2023 ರಂದು ಅಧಿಕಾರ ವಹಿಸಿಕೊಂಡರು. ಅವರಿಗೆ ಅಭಿನಂದನೆಗಳು ಮತ್ತು ಮುಂದಿನ ಕಾರ್ಯ ಅವಧಿಗೆ ಶುಭಾಶಯಗಳು.

ಹಿಂದಿನ 2021–23ರ ಅವಧಿಯಲ್ಲಿ ಕಾವಲು ಸಮಿತಿಯಲ್ಲಿ ಸೇವೆ ಸಲ್ಲಿಸಿದ ಶ್ರೀ ಈಶ್ವರ ಮಡಿವಾಳ ಮತ್ತು ಶ್ರೀ ಡಿ.ವಿ.ಎಸ್. ಮೂರ್ತಿ ಅವರನ್ನು ಗೌರವಿಸಿ, ಸನ್ಮಾನಿಸಿ ಬೀಳ್ಕೊಡಲಾಯಿತು.



**ಶ್ರೀ ಡಿ.ವಿ.ಎಸ್. ಮೂರ್ತಿ**



**ಶ್ರೀ ಈಶ್ವರ ಮಡಿವಾಳ**

ಕೊರೊನ ಸಂದರ್ಭದಲ್ಲಿ ಸಂಘದ ಕಾರ್ಯ ಚಟುವಟಿಕೆಗಳನ್ನು ಮುತುವರ್ಜಿಯಿಂದ ಸಮರ್ಪಕವಾಗಿ ನೋಡಿಕೊಂಡ, ಹಿಂದಿನ ಕಾವಲು ಸಮಿತಿಯ ಸದಸ್ಯರ ಸೇವೆ ಸ್ಮರಣೀಯ. ಅವರಿಗೆ ಸಮಸ್ತ ದೆಹಲಿ ಕರ್ನಾಟಕ ಸಂಘದ ಸದಸ್ಯರ ಮತ್ತು ದೆಹಲಿ ಕನ್ನಡಿಗರ ಪರವಾಗಿ ಅನಂತ ಕೃತಜ್ಞತೆಗಳು.

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**ಏಪ್ರಿಲ್ 8 ಮತ್ತು 9, 2023**
**ಕ್ರಿಕೆಟ್ ಪಂದ್ಯಾವಳಿ**

**ಸ್ಥಳ : ಸಿವಿಲ್ ಸರ್ವಿಸಸ್ ಗ್ರೌಂಡ್, ವಿನಯ್ ಮಾರ್ಗ, ನವದೆಹಲಿ**

**16 ಏಪ್ರಿಲ್ 2023 ಪಿಕ್‌ನಿಕ್**

**ಆತ್ಮೀಯರೇ,**

**ದಿನಾಂಕ 16/04/2023 ಭಾನುವಾರ ದೆಹಲಿ ಕರ್ನಾಟಕ ಸಂಘದಿಂದ ಹರಿದ್ವಾರ ಮತ್ತು ರಿಷಿಕೇಶ್‌ಗೆ ಪಿಕ್‌ನಿಕ್ ಆಯೋಜಿಸಿದ್ದೇವೆ. ಈ ಪಿಕ್‌ನಿಕ್‌ಗೆ ಎಲ್ಲಾ ಸದಸ್ಯರುಗಳು ಭಾಗವಹಿಸಬೇಕಾಗಿ ವಿನಂತಿ.**

**ಸಂಘದ ಆಜೀವ ಸದಸ್ಯರು ಮತ್ತು ಸದಸ್ಯರ ಕುಟುಂಬಗಳಿಗೆ ಒಬ್ಬರಿಗೆ 500 ರೂಪಾಯಿ. ಸಂಘದ ಸದಸ್ಯರಲ್ಲದ ದೆಹಲಿ ಕನ್ನಡಿಗರಿಗೆ ಒಬ್ಬರಿಗೆ 1200 ರೂಪಾಯಿ.**

**ಹವಾನಿಯಂತ್ರಿತ ಬಸ್ಸುಗಳು, ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ರಾತ್ರಿ ಊಟದ ವ್ಯವಸ್ಥೆ ಇರುತ್ತದೆ.**

**5 ವರ್ಷಕ್ಕೂ ಮೇಲ್ಪಟ್ಟ ಸದಸ್ಯರ ಮಕ್ಕಳಿಗೆ 500 ರೂಪಾಯಿ, ಸದಸ್ಯರಲ್ಲದ ಮಕ್ಕಳಿಗೆ 1200 ಪೂರ್ಣ ಹಣ ನೀಡಬೇಕು.**

**5 ವರ್ಷ ಕೆಳಪಟ್ಟ ಮಕ್ಕಳಿಗೆ ಉಚಿತ. ಬಸ್ಸಿನಲ್ಲಿ ಸೀಟ್ ವ್ಯವಸ್ಥೆ ಬೇಕು ಎಂದರೆ ಪೂರ್ಣ ಹಣ ನೀಡಬೇಕು.**

**ದಿನಾಂಕ 12/04/2023 ಬುಧವಾರ ಹೆಸರುಗಳನ್ನು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕವಾಗಿರುತ್ತದೆ. ನೋಂದಾಯಿಸಿಕೊಳ್ಳುವವರು ತಮ್ಮ ಹೆಸರು, ವಯಸ್ಸು, ಹೊರಡುವ ಸ್ಥಳ ಹಾಗೂ ಫೋನ್ ನಂಬರ್ ನೀಡುವ ಮೂಲಕ ನೊಂದಾಯಿಸಿಕೊಳ್ಳಿ.**

**ಸಂಪರ್ಕಿಸಿ : ಪ್ರವಾಸ ಸಮಿತಿ ಅಧ್ಯಕ್ಷರು ಕೆ.ಎಸ್. ಮೂರ್ತಿ–9871140222, ಸಂಚಾಲಕರು ಸಂತೋಷ ಜೆ–9911235783, 7982582780, ಸಂಘದ ಕಚೇರಿ–01126109615**

# "ದೆಹಲಿ ಕರ್ನಾಟಕ ಸಂಘದಲ್ಲಿ ಸಂಭ್ರಮದ ಮಹಿಳಾ ದಿನಾಚರಣೆ"



ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ ಮಾರ್ಚ್ 26, 2023 ರಂದು ಭಾನುವಾರ ಸಂಜೆ ಅರ್ಥಪೂರ್ಣವಾಗಿ ಆಚರಿಸಲಾದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ನಾಡು, ನುಡಿ, ದೇಶ, ಭಾಷೆಯ ಏಳಿಗೆಗೆ ಹಗಲಿರುಳು ಶ್ರಮಿಸುತ್ತಿರುವ ಮಹಿಳೆಯರಿಗೆ ಗೌರವ ಸಲ್ಲಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕನ್ನಡದ ಗೌರವಾನ್ವಿತ ಮಹಿಳೆ ನವದೆಹಲಿಯ ಸಿ.ಜಿ.ಎಚ್.ಎಸ್.ನಲ್ಲಿ ಚೀಫ್ ಮೆಡಿಕಲ್ ಆಫೀಸರ್ ಆಗಿರುವ ಡಾ. ಹೊನ್ನಮ್ಮ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ದೆಹಲಿ ಕರ್ನಾಟಕ ಸಂಘ ಬಹಳ ದಿನಗಳಿಂದ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. "ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೆ ದೇವತಾಃ" ಎಲ್ಲಿ ಹೆಣ್ಣು ಮಕ್ಕಳನ್ನು ಪೂಜಿಸುತ್ತಾರೋ, ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎನ್ನುವ ಮಾತಿದೆ. 1908 ರಲ್ಲಿ ಫೆಬ್ರುವರಿ 28 ರಂದು ಅಮೆರಿಕಾದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತಿತ್ತು. ತದನಂತರ ಅಮೆರಿಕಾ ದೇಶದ ಮಹಿಳೆಯರೆಲ್ಲರೂ ಸೇರಿ ಮಹಿಳೆಯರ ಹಕ್ಕು ಮತ್ತು ಸಂರಕ್ಷಣೆಗಾಗಿ ಮಾರ್ಚ್ 08 ಅನ್ನು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರುತ್ತಿದ್ದಾರೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ಜಗತ್ತಿನ ಯಾವುದೇ ದೇಶಗಳಲ್ಲಿ ಮಹಿಳೆಯರಿಗೆ ಅಷ್ಟೊಂದು ಸಮಾನ ಸ್ಥಾನಮಾನಗಳನ್ನು, ಸಂಬಳ ಹಾಗೂ ಕೆಲಸಗಳನ್ನು ನೀಡುತ್ತಿಲ್ಲ. ಫಿನ್‌ಲ್ಯಾಂಡ್‌ನಂತಹ ಕೆಲವು ದೇಶಗಳು ಮಾತ್ರ ಮಹಿಳೆಯರಿಗೆ ಪುರುಷರಿಗೆ ಸಮನಾದ ಸ್ಥಾನಮಾನಗಳನ್ನು ನೀಡುತ್ತಿವೆ ಎಂದು ಉದಾಹರಣೆ ಸಹಿತ ವಿವರಿಸಿದ ಡಾ. ಹೊನ್ನಮ್ಮ ಅವರು ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ತಮ್ಮನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿದ್ದಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರಿಗೆ ಕೃತಜ್ಞತೆ ತಿಳಿಸಿದರು.

ಕಾರ್ಯಕ್ರಮದ ಮತ್ತೊರ್ವ ಅತಿಥಿಯಾಗಿ ಭಾಗವಹಿಸಿದ್ದ ಮನಶ್ಶಾಸ್ತ್ರ ವಿಭಾಗದಲ್ಲಿ ಎಂ.ಎಸ್ಸಿ. ಪದವೀಧರೆ ಜಯಶ್ರೀ ಪಬ್ಲಿಕ್ ಶಾಲೆಯನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಮತ್ತು ಬೆಂಗಳೂರು ನಗರ ಜಿಲ್ಲಾಧಿಕಾರಿ ಶ್ರೀ ಕೆ.ಎ. ದಯಾನಂದ ಐಎಎಸ್, ಅವರ ಧರ್ಮಪತ್ನಿ ಶ್ರೀಮತಿ ಸ್ಫೂರ್ತಿಯವರು ಮಾತನಾಡಿ ದೆಹಲಿ ಕರ್ನಾಟಕ ಸಂಘಕ್ಕೆ ಪ್ರತಿ ಬಾರಿಯೂ ಬಂದಾಗ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಿಶೇಷವಾದ ಆತಿಥ್ಯವನ್ನು ನೀಡಿ ಗೌರವಿಸುತ್ತಾರೆ ಅವರಿಗೆ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ, ನಮ್ಮ ಜೀವನದಲ್ಲಿ ಮಹಿಳಾ ದಿನಾಚರಣೆ ಒಂದು ದಿನದ ಆಚರಣೆಯಾಗದೆ ಪ್ರತಿನಿತ್ಯ ಆಗಬೇಕು. ಅಂತಹ ಕೆಲಸ, ಕಾರ್ಯ, ಜವಾಬ್ದಾರಿಗಳಿಗೆ ನಾವು ಸೇವೆ ಸಲ್ಲಿಸಬೇಕು. ಮಹಿಳೆಯರಿಗೆ ದಿನನಿತ್ಯದ ಜಂಜಾಟದಲ್ಲಿ ಒತ್ತಡಗಳು ಜಾಸ್ತಿ ಇರುತ್ತವೆ. ಅದರ ನಡುವೆ ಮಹಿಳೆಯರು ತಮ್ಮ ಆರೋಗ್ಯ ಮತ್ತು ಕೆಲಸಗಳಿಗೆ ಪ್ರಾಮುಖ್ಯತೆ ನೀಡಬೇಕು ಎಂದು ಹೇಳಿದರು.





ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ದೆಹಲಿ ಕರ್ನಾಟಕ ಸಂಘವು ತನ್ನ ಸ್ಥಾಪನೆಯ 75 ವರ್ಷಗಳ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಈ ಮಹಿಳಾ ದಿನಾಚರಣೆ ಬಹಳ ವಿಶೇಷವಾಗಿದ್ದು ಎಂದು ಹೇಳಿ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಂತಹ ಎಲ್ಲ ಮಹಿಳೆಯರಿಗೂ ತಮ್ಮ ಅಭಿನಂದನೆಗಳನ್ನು ತಿಳಿಸಿದರು. ಕನ್ನಡದ ಬೆಳವಣಿಗೆಗಾಗಿ ನೂರಾರು ಕನ್ನಡ ಸಂಘ ಸಂಸ್ಥೆಗಳಿಗೆ ಸಹಾಯ ಮಾಡುತ್ತಾ ಬರುತ್ತಿರುವ ಕರ್ನಾಟಕದ ಹಿರಿಯ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ದಯಾನಂದ್ ಸರ್ ಅವರು ನಮಗೆಲ್ಲಾ ಸ್ಫೂರ್ತಿ ಆದರೆ ಅವರ ಧರ್ಮಪತ್ನಿಯಾಗಿರುವ ಶ್ರೀಮತಿ ಸ್ಫೂರ್ತಿಯವರು ದಯಾನಂದ್ ಸರ್ ಅವರಿಗೆ ಸ್ಫೂರ್ತಿಯಾಗಿದ್ದಾರೆ. ಶ್ರೀ ದಯಾನಂದ್ ಸರ್ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಸಮಯದಲ್ಲಿ ಬಹಳ ಸಹಕಾರ ಮತ್ತು ನೆರವು ನೀಡಿದ್ದಾರೆ. ದೆಹಲಿಯ

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಾಗಲು ಅವರು ಮೂಲ ಕಾರಣಕರ್ತರು. ಅವರ ಕಾರ್ಯ ದಕ್ಷತೆಯಿಂದಾಗಿ ಈಗ ಬೆಂಗಳೂರು ಜಿಲ್ಲೆ (ನಗರ) ಯ ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದು ಅವರಿಗೆ ಇನ್ನೂ ಹೆಚ್ಚಿನ ಕೆಲಸ ಮಾಡುವ ಅವಕಾಶಗಳು ಸಿಗಲಿ ಎಂದು ಹಾರೈಸಿದರು.

ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಶ್ರೀಮತಿ ಪೂಜಾರಾವ್ ಅವರು ಸಂಘದ ಮಹಿಳಾ ಉಪಾಧ್ಯಕ್ಷೆಯಾಗಿ, ಶ್ರೀಮತಿ ಸುಮಿತಾ ಮುರುಗೋಡ ಅವರು ಮಹಿಳಾ ಜಂಟಿ ಕಾರ್ಯದರ್ಶಿಯಾಗಿ, ಕಾರ್ಯಕಾರಿ ಸಮಿತಿ ಸದಸ್ಯೆಯರಾಗಿ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ ಮತ್ತು ಶ್ರೀಮತಿ ಆಶಾ ಶ್ಯಾಮ್ ಸುಂದರ್ ಅವರುಗಳು ನಮ್ಮ ಸಂಘಕ್ಕೆ ಅತಿ ದೊಡ್ಡ ಶಕ್ತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಮ್ಮ ಕನಸಾಗಿದ್ದ 75 ವರ್ಷಗಳ ಅಮೃತ ಮಹೋತ್ಸವ ಕಾರ್ಯಕ್ರಮದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದಂತ ದೇಶದ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿ ಅವರು ದೆಹಲಿ ಕರ್ನಾಟಕ ಸಂಘದ ಹೆಸರನ್ನು ತಮ್ಮ ಭಾಷಣದಲ್ಲಿ ಹಲವು ಬಾರಿ ಹೇಳುವುದರ ಮೂಲಕ ಸಂಘದ ಸಾಧನೆಗಳನ್ನು ಕೊಂಡಾಡಿದ್ದಾರೆ.ಜೊತೆಗೆ ದೇಶವು ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸಿಕೊಳ್ಳುವ ಸಂದರ್ಭದಲ್ಲಿ ಸಂಘವೂ ಸಹ ಮುಂದಿನ 25 ವರ್ಷಗಳ ಕಾಲ ಏನೇನು ಕೆಲಸಗಳನ್ನು ಮಾಡಬಹುದು ಎಂಬ ಸಲಹೆಗಳನ್ನು ಪ್ರಧಾನಿಯವರು ನೀಡಿದ್ದು ಸಂಘದ ಶತಮಾನೋತ್ಸವ ಆಚರಿಸುವ ಕಾಲದಲ್ಲಿ ಅಂದಿನ ಪೀಳಿಗೆ ಅವುಗಳನ್ನು ಸ್ಮರಿಸುತ್ತಾರೆ ಎಂದಿದ್ದಾರೆ.

ಅಂತಹ ದೊಡ್ಡಮಟ್ಟದ ಕಾರ್ಯಕ್ರಮದ ಸಂದರ್ಭದಲ್ಲಿ ನಾಡಿನಿಂದ ಪೂಜ್ಯ ಗುರು ವರೇಣ್ಯರನ್ನು ಕರೆತರುವುದು, ಸಾವಿರಾರು ಕಲಾವಿದರನ್ನ ಜೊತೆಗೆ ಎಲ್ಲ ರೀತಿಯಾಗಿ ಕಾರ್ಯಕ್ರಮದ ಆಯೋಜನೆ ಮಾಡುವ ಸಂದರ್ಭದಲ್ಲಿ ನಮ್ಮ ಸಂಘಕ್ಕೆ ಜೊತೆಯಾಗಿ ನಿಂತು ಹಗಲು ರಾತ್ರಿ ಸೇವೆ ಸಲ್ಲಿಸಿದ ಮಹಿಳಾ ಸದಸ್ಯರಿಗೆ ಹಾಗೂ ದುಡಿದ ಇತರೆ ಎಲ್ಲ ಮಹಿಳೆಯರಿಗೆ ಧನ್ಯವಾದಗಳನ್ನು ಅಧ್ಯಕ್ಷರು ತಿಳಿಸಿದರು. ಮುಂದೆ ಇನ್ನು ಹಲವಾರು ಯೋಜನೆಗಳಿವೆ, ಕಾರ್ಯಕ್ರಮಗಳಿವೆ ಅವುಗಳನ್ನು ದೆಹಲಿ ಕನ್ನಡಿಗರೆಲ್ಲರೂ ಒಟ್ಟಿಗೆ ಸೇರಿ ಆಯೋಜಿಸಿಕೊಂಡು ಹೋಗೋಣ ಎಂದು ಕರೆ ನೀಡಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಅವರು, ಹೆಣ್ಣು ತಾನು ಮಾಡುವ














ಕರ್ತವ್ಯಗಳಿಂದಲೇ ದೈವ ಸಮಾನಳಾಗಿದ್ದಾಳೆ. ಹೆಣ್ಣು ಮಾಡುವ ಆರೈಕೆ, ನೀಡುವ ಆಹಾರ ಮತ್ತು ಪ್ರೀತಿ ಇವೆಲ್ಲಗಳು ಅವಳನ್ನು ಅತಿ ಗೌರವ ಸ್ಥಾನದಲ್ಲಿಡಿಸಿವೆ. ನಮ್ಮ ಮನೆ, ಮನಸ್ಸು ದೇಶದಲ್ಲಿ ಹೆಣ್ಣಿನ ಸಂಸ್ಕೃತಿ ಬಹಳ ಉಚ್ಚಸ್ಥಾನದಲ್ಲಿದೆ. ಈ ಗೌರವ ಸದಾ ಮುಂದುವರೆಯುತ್ತದೆ ಮತ್ತು ದೆಹಲಿ ಕರ್ನಾಟಕ ಸಂಘವು ಮಹಿಳೆಯರಿಗಾಗಿಯೇ ಈ ರೀತಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲು ಉತ್ಸುಕವಾಗಿದೆ ಎಂದು ಹೇಳಿ ಎಲ್ಲರಿಗೂ ಮಹಿಳಾ ದಿನದ ಅಭಿನಂದನೆಗಳನ್ನು ಸಲ್ಲಿಸಿದರು.

ಸಭಾ ಕಾರ್ಯಕ್ರಮದ ನಂತರ ದೆಹಲಿಯ ಕನ್ನಡಿಗ ಮಹಿಳೆಯರು ಪ್ರಸ್ತುತಪಡಿಸಿದ ನೃತ್ಯರೂಪಕ, ಕಿರು ನಾಟಕ, ಭಾವಗೀತೆ, ನಾಡಗೀತೆ, ಹಾಗೂ ವಿವಿಧ ಮನರಂಜನೆ ಕಾರ್ಯಕ್ರಮಗಳು ಸುಂದರವಾಗಿ ಮತ್ತು ಸುಮಧುರವಾಗಿ ಮೂಡಿ ಬಂದವು. ಈ ಸಂದರ್ಭದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಮತ್ತು ಮುಖ್ಯ ಅತಿಥಿಗಳನ್ನು ಅಭಿನಂದಿಸಿ ಸತ್ಕರಿಸಲಾಯಿತು.

ಸುಮಾರು 3 ಗಂಟೆಗಳ ಕಾಲ ಸುಂದರವಾಗಿ ನಡೆದ ಸಮಾರಂಭದಲ್ಲಿ ಅತಿಥಿಗಳ ಪರಿಚಯ ಮತ್ತು ವೇದಿಕೆ ಕಾರ್ಯಕ್ರಮವನ್ನು ಶ್ರೀಮತಿ ಪೂಜಾ ರಾವ್ ಅವರು ನಿರ್ವಹಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಮಾಲಿನಿ ಪ್ರಹ್ಲಾದ್ ಸಹಕರಿಸಿದರು. ಶ್ರೀಮತಿ ಸಮಿತಾ ಮುರಗೋಡ ಅವರು ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿ, ಕುಟುಂಬಗಳಲ್ಲಿ ಹೆಣ್ಣಿನ ಪ್ರಾಮುಖ್ಯತೆ ತ್ಯಾಗ, ಶ್ರಮ ಸಾಧನೆಗಳನ್ನು ತಿಳಿಸುತ್ತಾ ಸಭಾಂಗಣದಲ್ಲಿ ಉಪಸ್ಥಿತರಿದ್ದ ತಮ್ಮ ತಂದೆ ತಾಯಿಯವರಿಗೆ ಗೌರವ ಸಲ್ಲಿಸಿ ತಮ್ಮ ಜೀವನದ ಕೆಲವು ಅನುಭವಗಳನ್ನು ಹಂಚಿಕೊಂಡರು. ಶ್ರೀಮತಿ ಸವಿತಾ ನೆಲ್ಲಿ ಅವರು ಕಾರ್ಯಕ್ರಮದ ವಂದನಾರ್ಪಣೆಯನ್ನು ನಡೆಸಿಕೊಟ್ಟರು.

**ಅಭಿಮತ ವರದಿ**






# ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ




ದೆಹಲಿ ಕರ್ನಾಟಕ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 05.03.2023 ರಂದು ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ವಾರ್ಷಿಕ ವರದಿಯನ್ನು ಹಾಗೂ ಕೋಶಾಧಿಕಾರಿ ಶ್ರೀ ರಾಧಾಕೃಷ್ಣ ಅವರು 2021–22ರ ಪರಿಶೋಧಿತ ಲೆಕ್ಕಪತ್ರ ಮತ್ತು 2022–23 ಮತ್ತು 2023–24 ಸಾಲಿನ ಬಜೆಟನ್ನು ಮಂಡಿಸಿದರು. ಉಪಾಧ್ಯಕ್ಷರುಗಳಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀಮತಿ ಪೂಜಾ ಪಿ. ರಾವ್ ಹಾಗೂ ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ನಾರಾಯಣ, ಶ್ರೀಮತಿ ಸುಮಿತಾ ಮುರಗೋಡ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯು ಬೆಳಿಗ್ಗೆ 11.00 ಗಂಟೆಯಿಂದ ಪ್ರಾರಂಭವಾಯಿತು.

ಈ ವರ್ಷ ನಮ್ಮನ್ನು ಅಗಲಿದ ಸಂಘದ ಆಜೀವ ಸದಸ್ಯರುಗಳಾದ ಶ್ರೀ ಬಿ.ಪಿ. ಉತ್ತಪ್ಪ, ಶ್ರೀ ಎಚ್. ಮಲ್ಲಿಕಾರ್ಜುನ, ಶ್ರೀ ಮಂಜುನಾಥ ಕೆ, ಶ್ರೀ ಚನ್ನೇಗೌಡ ಎಸ್.ಜೆ., ಶ್ರೀ ಪಾಟೀಲ ಪುಟ್ಟಪ್ಪ, ಶ್ರೀ ಸುಧಾಕರ ಕುರಂದವಾಡ, ಶ್ರೀ ಬಸವರಾಜ ಎಸ್. ಯು., ಶ್ರೀ ಎನ್.ಆರ್. ಶೆಂಡಿ, ಶ್ರೀ ಸಿದ್ದಲಿಂಗಪ್ಪ, ಶ್ರೀ ಅರುಣ್ ಕುಮಾರ್, ಶ್ರೀ ಎಂ.ವಿ. ನಾರಾಯಣ ರಾವ್, ಶ್ರೀ ಸುಂದರ್ ಬಿ.ಎಂ., ಶ್ರೀ ಎಚ್.ಎಂ.ಆರ್. ರಾವ್, ಶ್ರೀ ನಾಗರಾಜ ರಾವ್ ಎಂ.ಎಸ್., ಶ್ರೀ ಎಂ.ಡಿ ಸಿದ್ದರಾಮಯ್ಯ, ಶ್ರೀ ಟಿ.ಎಂ. ಶಿರೂರು, ಶ್ರೀ ಮಹಾಬಲೇಶ್ವರ ಭಟ್ ಅವರನ್ನು ನೆನೆದು ಎರಡು ನಿಮಿಷಗಳ ಮೌನ ಪ್ರಾರ್ಥನೆ ನಡೆಸಲಾಯಿತು.

ಸಂಘದ ಆಜೀವ ಸದಸ್ಯರುಗಳಾದ ಶ್ರೀ ಅನಂತರಾಮ ಅರಳಿ, ಶ್ರೀ ಎಸ್.ಕೃಷ್ಣ ಭಟ್, ಶ್ರೀ ಈಶ್ವರ ಮಡಿವಾಳ್, ಶ್ರೀ ಕೆ.ಆರ್. ರಾಮಮೂರ್ತಿ,











ಡಾ. ವೈ. ಅವನೀಂದ್ರನಾಥ್ ರಾವ್, ಹಿರಿಯರಾದ ಶ್ರೀ ಬಸವರಾಜ್ ಎಸ್. ಕಲ್ಲೂರು, ಶ್ರೀ ಎನ್.ಎ. ಮಾಧವ, ಶ್ರೀ ಚೆನ್ನು ಎಸ್.ಮಠದ, ಡಾ. ಅಹಲ್ಯಾ ಚಿಂತಾಮಣಿ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಲಕ್ಷ್ಮಣ್ ಮಲ್ಯ, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ನರಸಿಂಹ ಮೂರ್ತಿ, ಶ್ರೀ ಕೃಷ್ಣಪ್ಪ, ಶ್ರೀ ಶ್ರೀಹರಿ ಮೊದಲಾದವರು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಿದರು.

ಚರ್ಚೆಯ ಬಳಿಕ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಅನುಮೋದಿಸಲಾಯಿತು.

***ಅಭಿಮತ ವರದಿ***

# ಸಂಘದಲ್ಲಿ ವಿಚಾರ ಸಂಕಿರಣ : ನಾಡೋಜ ಡಾ. ಹಂಪ ನಾಗರಾಜಯ್ಯ ವಿರಚಿತ 'Spectrum of Classical Literature in Karnataka' ಕುರಿತು ಅನುಸಂಧಾನ




ದಿನಾಂಕ 29.03.2023ರಂದು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಲಾದ ಸಾಹಿತ್ಯಕ ಕಾರ್ಯಕ್ರಮದಲ್ಲಿ ನಾಡೋಜ ಡಾ. ಹಂಪ ನಾಗರಾಜಯ್ಯನವರ 'Spectrum of Classical Literature in Karnataka' ಕೃತಿ ಕುರಿತು ವಿಚಾರ ವಿಮರ್ಶೆ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಕೇಂದ್ರ ಬಿಂದು ಸಂಶೋಧಕರು, ಚಿಂತಕರು ಹಾಗೂ ಕುವೆಂಪು ಪ್ರತಿಷ್ಠಾನ ಕುಪ್ಪಳಿಯ ಅಧ್ಯಕ್ಷರಾದ ನಾಡೋಜ ಡಾ. ಹಂಪನಾ ಗೌರವ ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಕವಿ, ಸಾಹಿತಿ, ಮಾನ್ಯ ರಾಜ್ಯಸಭಾ ಸಂಸದರಾದ ಡಾ. ಎಲ್. ಹನುಮಂತಯ್ಯನವರು ಆಗಮಿಸಿದ್ದರು. ಖ್ಯಾತ ಕವಿ, ಜೆ.ಎನ್.ಯು.ನ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್.ಎಸ್. ಶಿವಪ್ರಕಾಶ್‌ರವರು, ಜಾನಪದ ವಿದ್ವಾಂಸರು ಹಾಗೂ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮಾಜಿ ಮುಖ್ಯಸ್ಥರು ಹಾಗು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮತ್ತು ಚಿಂತಕರು ಕುವೆಂಪು ವಿ.ವಿ. ಯ ನಿವೃತ್ತ ಪ್ರಾಧ್ಯಾಪಕರಾದ ಡಾ. ರಾಜೇಂದ್ರ ಚೆನ್ನಿಯವರು ಉಪಸ್ಥಿತರಿದ್ದು ಪುಸ್ತಕದ ಕುರಿತು ತಮ್ಮ ವಿಚಾರ ಮಂಡನೆ ಮಾಡಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗು ಸಂಘದ ಮುಖವಾಣಿ ಮಾಸಪತ್ರಿಕೆ 'ಅಭಿಮತ' ಸಂಪಾದಕರಾದ ಶ್ರೀ ಚಂದ್ರಶೇಖರ ಎನ್.ಪಿ.ಯವರು ಕಾರ್ಯಕ್ರಮದ ಸಂಯೋಜನೆ ಮಾಡಿದ್ದರು. ಆರಂಭಿಕ ಮಾತುಗಳೊಂದಿಗೆ ಕಾರ್ಯಕ್ರಮ ಆಯೋಜನೆ ಹಿನ್ನೆಲೆಯನ್ನು ವಿವರಿಸಿ ನಿರೂಪಣೆಯನ್ನು ಪ್ರಾರಂಭಿಸಿದರು.

ಶ್ರೀಮತಿ ಶಾಂತಲಾಕಿರಣ್‌ರವರ 'ಮಾವರತು ಶ್ರೀ ಸರಸ್ವತಿ' ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ವಿದ್ಯುಕ್ತವಾಗಿ ಚಾಲನೆಗೊಂಡಿತು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್‌ರವರು ಉಪಸ್ಥಿತರಿದ್ದ ಮುಖ್ಯ ಅತಿಥಿಗಳನ್ನು, ಹಿರಿಯ ಸಾಹಿತಿ ಗಣ್ಯರನ್ನು ಮತ್ತು ವಿಚಾರ ಸಂಕಿರಣದಲ್ಲಿ ಉತ್ತಮ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ದೆಹಲಿ ಎನ್.ಸಿ.ಆರ್. ಕನ್ನಡಿಗರನ್ನು ಆತ್ಮೀಯವಾಗಿ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾಹಿತ್ಯಲೋಕದ ದಿಗ್ಗಜರಾದ ಈ ಅಮೂಲ್ಯರತ್ನಗಳೊಂದಿಗೆ ನಾವು ಸಂಘದ ವೇದಿಕೆಯಲ್ಲಿ ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳುತ್ತಿರುವುದು ನಮ್ಮ ಸೌಭಾಗ್ಯವೆಂದು ಹೇಳುತ್ತ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು. ಕಾರ್ಯಕ್ರಮದ ಸಂಯೋಜಕರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.




ತಮ್ಮ ವಿಚಾರ ಮಂಡಿಸಿದ ಡಾ. ಪುರುಷೋತ್ತಮ ಬಿಳಿಮಲೆಯವರು ಡಾ. ಹಂಪನಾರವರ ಕೃತಿಯ ಐದು ಸಂಪುಟಗಳ ಬಗ್ಗೆ ಒಂದು ಪಕ್ಷಿನೋಟವನ್ನು ನೀಡಿದರು. ಅವರು ಮಾತನಾಡುತ್ತಾ ನಾಡಿನ ಹಿರಿಯ ಚಿಂತಕರಾದ ಡಾ. ಹಂಪ ನಾಗರಾಜಯ್ಯ ಅವರು ಅಪಾರ ಶ್ರಮವಹಿಸಿ ತಮ್ಮ ಇಳಿವಯಸ್ಸಿನಲ್ಲಿ ಸಿದ್ಧಪಡಿಸಿದ ಐದು ಸಂಪುಟಗಳು ಕನ್ನಡ ಅಭಿಜಾತ ಸಾಹಿತ್ಯದ ಹಿರಿಮೆಯನ್ನು ಕನ್ನಡೇತರರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಕನ್ನಡವನ್ನು ನಾವು ಹೀಗೆ ಪರಿಚಯಿಸದೇ ಹೋದರೆ ಕನ್ನಡಕ್ಕೆ ಉಳಿಗಾಲವಿಲ್ಲ.

ಇವತ್ತು ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣವೂ (Internationalization of higher education) ಜೋರಾಗಿ ನಡೆಯುತ್ತಿದೆ. ಪಠ್ಯಕ್ರಮಗಳನ್ನು ಎರಡೂ ದೇಶಗಳ ಶಿಕ್ಷಣ ಸಂಸ್ಥೆಗಳು ಜಂಟಿಯಾಗಿ ರೂಪಿಸುತ್ತಿವೆ. ಬಂಗಾಳೀ, ಮಲೆಯಾಳೀ ಮತ್ತು ತಮಿಳು ಭಾಷೆಗಳು ಅನುವಾದಗಳ ಮೂಲಕ ಈಗಾಗಲೇ ಹೊಸ ಸವಾಲುಗಳನ್ನು ಸ್ವೀಕರಿಸಿ, ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಲಗ್ಗೆ ಹಾಕಿವೆ. ಆದರೆ ಕನ್ನಡಕ್ಕೆ ಮಾತ್ರ ಅಂತ ಭಾಗ್ಯ ಇನ್ನೂ ಬಂದಿಲ್ಲ. ಇಂಥ ಸಂದರ್ಭದಲ್ಲಿ ಹಂಪನಾ ಅವರ ಅಭಿಜಾತ ಸಾಹಿತ್ಯ ಅನುವಾದದ Spectrum of Classical Literature in Karnataka ಕೃತಿಯ ಐದು ಸಂಪುಟಗಳಿಗೆ ಐತಿಹಾಸಿಕ ಮಹತ್ವವೂ ಇದೆ.



ಈ ಸಂಪುಟಗಳು ಕನ್ನಡ ಅಭಿಜಾತ ಸಾಹಿತ್ಯ ಪರಂಪರೆಗೆ ಸೇರಿದ ಮುಖ್ಯ ಕೃತಿಗಳನ್ನು ಮತ್ತು ಕವಿಗಳನ್ನು ಕನ್ನಡೇತರರಿಗೆ ಸೊಗಸಾಗಿ ಪರಿಚಯಿಸುವ ಉದ್ದೇಶವನ್ನು ಹೊಂದಿದೆ. ಹೀಗಾಗಿ ಈ ಸಂಪುಟಗಳು ಅಭಿಜಾತ ಸಾಹಿತ್ಯವನ್ನು ಬಹಳ ವಿಮರ್ಶಾತ್ಮಕವಾಗಿಯೇನೂ ನೋಡುವುದಿಲ್ಲ. ಬದಲಾಗಿ ಅವುಗಳನ್ನು ಓದಿದವರು ಕನ್ನಡದ ಕಡೆಗೆ ಆಕರ್ಷಿತರಾಗಿ ಮತ್ತಷ್ಟು ಕನ್ನಡವನ್ನು ಓದಬೇಕು. ಹೀಗೆ ಮಾಡಬೇಕಾದ್ದು ಇಂದಿನ ಅಗತ್ಯವೂ ಹೌದು. ಈ ಧೋರಣೆಯಲ್ಲಿಯೇ ಐದೂ ಸಂಪುಟಗಳು ಸಿದ್ಧಗೊಂಡಿವೆ. ಈ ಸಂಪುಟಗಳ ಮುಖ್ಯ ಉದ್ದೇಶವು ಅಭಿಜಾತ ಯುಗದ ಕವಿ ಕೃತಿಗಳನ್ನು ಇಂಗ್ಲಿಷಿಗೆ ಅನುವಾದ ಮಾಡುವುದರ ಜೊತೆಗೆ, ಸಹೃದಯರನ್ನು ಕನ್ನಡದ ಕೃತಿಗಳ ಕಡೆಗೆ ಸೆಳೆಯುವುದು. ಅದಕ್ಕಾಗಿ ಅವರು ಮೂಲ ಪಠ್ಯದ ಕೆಲವು ಅತ್ಯುತ್ತಮ ಪದ್ಯಗಳನ್ನೇ ಅನುವಾದಕ್ಕೆ ಆಯ್ದುಕೊಂಡಿದ್ದಾರೆ. ಇವು ಓದುಗರಿಗೆ ಕಾವ್ಯದ ಸೊಗಸನ್ನು ಬಿಡಿಸಿ ತೋರಿಸುವಲ್ಲಿ ಯಶಸ್ವಿಯಾಗಿವೆ ಎಂದರು. ಐದು ಸಂಪುಟಗಳ ಈ ಕೃತಿಯ ಒಂದೊಂದು ಸಂಪುಟದಲ್ಲಿ ಬಿಂಬಿಸಲಾದ ವಿವರಗಳನ್ನು ತಿಳಿಸಿದರು. ಹಾಗೇನೇ ಡಾ. ಹಂಪನಾರವರಿಗೆ ಇತ್ತೀಚೆಗೆ ನೀಡಲಾದ SAARC Award for Literature ಅನ್ನು ಅವರ ಪರವಾಗಿ ಅವರ ಅನುಪಸ್ಥಿತಿಯಲ್ಲಿ ತಾವು ಸ್ವೀಕರಿಸಿದ್ದು ತಮಗೆ ಖುಷಿ ತಂದಿದೆ, ತಮ್ಮ ವೈಯಕ್ತಿಕ ಅಭಿನಂದನೆಗಳೊಂದಿಗೆ ಇಂದಿನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ನೀಡಿದ ಪ್ರಶಸ್ತಿಪತ್ರ, ಸ್ಮರಣಿಕೆಗಳನ್ನು ಅತ್ಯಂತ ಗೌರವಪೂರ್ವಕವಾಗಿ ಅವರಿಗೆ ಹಸ್ತಾಂತರಿಸಲು ತುಂಬಾ ಸಂತೋಷವಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳಿದರು.

ಡಾ. ಹಂಪನಾ ಅವರ ಪುಸ್ತಕದ ವಿಶ್ಲೇಷಣೆ ಮಾಡುತ್ತಾ ಕನ್ನಡ ಸಾಹಿತ್ಯವನ್ನು, ಕರ್ನಾಟಕವನ್ನು ಜಾಗತಿಕ ಮಟ್ಟದಲ್ಲಿ ಕನ್ನಡಿಗರಿಗೆ ಕನ್ನಡೇತರರಿಗೆ ಪರಿಚಯಿಸುತ್ತೆ. ಕನ್ನಡ ಭಾಷೆಗೆ ಒಂದು ವಿಶೇಷ ಗುಣವಿದೆ. ಹೊಸ ವಿಚಾರಗಳನ್ನು ಬಹಳ ಮುಕ್ತವಾಗಿ ತೆಗೆದುಕೊಳ್ಳುತ್ತೆ. ಹಾಗೇನೇ ಇಂದಿನ ಸಮಯದಲ್ಲಿ ಕರ್ನಾಟಕದ, ಭಾರತದ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಭಾಷೆಗಳಲ್ಲಿ ಅಧ್ಯಯನ ಮಾಡಲು ವಿದೇಶದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಕನ್ನಡ ಭಾಷೆಯು ವಿದೇಶದ ವಿ.ವಿ.ಗಳಲ್ಲಿ ಅಧ್ಯಯನಕ್ಕೆ ಒಳಗೊಳ್ಳುತ್ತಿದೆ ಎಂದರು.

ಮುಂದುವರಿದು, ಡಾ. ಹಂಪನಾರವರ ಕೃತಿಯ ಮೊದಲನೇ ಸಂಪುಟ ಕನ್ನಡದ ಆದಿಕವಿ ಪಂಪ ಮತ್ತು ಪಂಪ ಪೂರ್ವದ ಕಾಲಘಟ್ಟದ ಕವಿಗಳು (ಶ್ರೀವಿಜಯ, ಬ್ರಾಜಿಷ್ಣು, ಅಸಗ ಮೊದಲಾದವರು) ಮತ್ತು ಅವರ ಕೃತಿಗಳ ಬಗ್ಗೆ ವಿವರ ನೀಡುತ್ತದೆ.

ಎರಡನೇ ಸಂಪುಟ–ಪಂಪೋತ್ತರ 14 ಕವಿಗಳು (ರನ್ನ, ಪೊನ್ನ, ಚಾವುಂಡರಾಯ, ನಾಗಸೇನ ಮೊದಲಾದವರು ಮತ್ತು ಜೈನ ಕವಿಗಳು) ಮತ್ತು ಅವರ ಕೃತಿಗಳಲ್ಲಿ ಮೂಡಿ ಬಂದ ಅಭಿಜಾತ ಸಾಹಿತ್ಯವನ್ನು ಪರಿಚಯಿಸುತ್ತದೆ.


ಮೂರನೇ ಸಂಪುಟ–11 ಮತ್ತು 12 ನೇ ಶತಮಾನದ 18 ಜೈನೇತ್ತರ ಕವಿಗಳ ಮತ್ತು ಅವರ ಕೃತಿ ಹಾಗೂ ಕಾರ್ಯಗಳ ಬಗ್ಗೆ ತಿಳಿಸುತ್ತದೆ.

ನಾಲ್ಕನೇ ಸಂಪುಟದಲ್ಲಿ ಕರ್ನಾಟಕದವರಾದ ಕರ್ನಾಟಕದಲ್ಲೇ ಹುಟ್ಟಿ, ನೆಲಸಿ ಸಂಸ್ಕೃತ ಮತ್ತು ಪ್ರಾಕೃತ ಮೊದಲಾದ ಬೇರೆ ಭಾಷೆಗಳಲ್ಲಿ ಬರೆದ ಸುಮಾರು 30 ಕವಿಗಳ ಬಗ್ಗೆ ಮತ್ತು ಅವರ ಕೃತಿಗಳ ಬಗ್ಗೆ ವಿವರಿಸಲಾಗಿದೆ.

ಐದನೇ ಸಂಪುಟದಲ್ಲಿ–ಶಾಸನ ಕವಿಗಳ ಬಗ್ಗೆ ಪಂಪನ ತಮ್ಮ ತೆಲುಗಿನ ಮೊದಲ ಕವಿ ಜಿನವಲ್ಲಭನ ಕನ್ನಡ, ತೆಲುಗು, ಸಂಸ್ಕೃತದಲ್ಲಿ ಬರೆದ ಶಾಸನಗಳು, ಹಲ್ಮಿಡಿ ಶಾಸನ, ವ್ಯಾಸಭಾರತ, ಜೈನರಾಮಾಯಣ, ಸಿರಿ ಭೂವಲಯಗಳ ಬಗ್ಗೆ ವಿವರಗಳಿವೆ ಎಂದು ಡಾ. ಪುರುಷೋತ್ತಮ ಬಿಳಿಮಲೆ ತಿಳಿಸಿದರು.



ಚಿಂತಕರು, ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ **ಡಾ. ರಾಜೇಂದ್ರ ಚೆನ್ನಿ**ಯವರು ಮಾತನಾಡಿ ಡಾ. ಹಂಪನಾರವರು ಬರೆದ ಐದು ಸಂಪುಟಗಳ ಈ ಕೃತಿ ಕನ್ನಡ ಭಾಷೆಯ ಬಗ್ಗೆ ಬರೆದ ಒಂದು ವಿಶ್ವಕೋಶ(Encyclopedia) ಎಂದು ವರ್ಣಿಸಿದರು. ಸಮಗ್ರ ಹಿನ್ನೆಲೆಯಲ್ಲಿ ಆಯಾ ಕಾಲದ ಜನ ಸಾಮಾನ್ಯರ ಜೀವನದ ಬಗ್ಗೆ, ಸಾಹಿತ್ಯದ ಬಗ್ಗೆ, ಕವಿಗಳ ಬಗ್ಗೆ, ರಾಜಕೀಯದ ಬಗ್ಗೆ ಬರೆದಂತಹ ಸಂಪುಟಗಳು ಇವು.ಇದರ ಮುಂದಿನ ಮುದ್ರಣ Rediscovery of Karnataka ಎಂದಾಗಬಹುದು ಎಂದು ಆಶಯ ವ್ಯಕ್ತಪಡಿಸಿದರು. ಸ್ಥಳೀಯ ಭಾಷೆಯಲ್ಲಿ ಕಾವ್ಯ ಮಿಮಾಂಸೆ ಬಂದದ್ದು ಕನ್ನಡದಲ್ಲಿ ಮೊದಲು. ಕನ್ನಡ ಭಾಷೆ ಸ್ಥಳೀಯ ಭಾಷೆಯಿಂದ ಇಂದು ಜಾಗತಿಕ (ಗ್ಲೋಬಲ್) ಭಾಷೆಯಾಗಿ ಗುರುತಿಸಲ್ಪಟ್ಟಿದೆ. ಕನ್ನಡ ಅನ್ನೋದು ಅಖಿಲ ಭಾರತ ಧ್ಯಾನದ ಮಾಧ್ಯಮ (Medium of Awareness) ಕನ್ನಡ ಹೆಸರಿಗೆ ಒಂದು ಭಾಷೆ ಆದರೆ ಹತ್ತು ಹಲವು ಭಾಷೆಗಳ ತತ್ವ ಪಡೆದಿದೆ. ಕನ್ನಡ ಜಾಯಮಾನದ ಮೂಲ ಹಳಗನ್ನಡ. ಕನ್ನಡ ವಿಶ್ವಸ್ಥ ಭಾಷೆಯಾಗಿತ್ತು. Kannada is the language of poetry and power. ಹಂಪನಾರವರ ಕೃತಿಯಲ್ಲಿ ಕನ್ನಡ ಭಾಷೆ ಕಾವ್ಯಧರ್ಮವನ್ನು ಪಾಲಿಸುತ್ತಾ ಧರ್ಮಗಳ ರಾಜಪ್ರಭುತ್ವ, ಧರ್ಮಪ್ರಭುತ್ವ ಹೊಂದಾಣಿಕೆ ಮತ್ತು ಸಹಬಾಳ್ವೆಯ ತತ್ವನ್ನು ಬಿಂಬಿಸಲಾಗಿದೆ. ಮೂರು ತಲೆಮಾರಿಗೆ ಆಗುವಂತಹ ಸೊಗಸಾದ ಲವಲವಿಕೆಯ ಇಂಗ್ಲಿಷ್ ಅನುವಾದ ಮಾಡಿದ್ದಾರೆ. ಜನ್ನನ ಯಶೋಧರ ಚರಿತ್ರೆ, ಜೈನಧರ್ಮ ಪ್ರತಿಷ್ಠಾಪನೆ ಮುಂತಾದ ವಿಚಾರಗಳನ್ನು ವಿವರವಾಗಿ ನೀಡಿದ್ದಾರೆ. ಅವರ 5 ಸಂಪುಟಗಳ ಪುಟಗಳಲ್ಲಿ ಹೆಚ್ಚಾಗಿ ಉಲ್ಲೇಖಿಸಿರುವ ಚರಮ ವಾಕ್ಯ This derserves revisiting ಮುಂದಿನ ಸಾಹಿತ್ಯ ಕೃಷಿಕರಿಗೆ ಒಂದು ರೋಡ್ ಮ್ಯಾಪ್ ಆಗಿರುತ್ತದೆ. ಈ ಕೃತಿಯನ್ನು ಬರೆದ ಡಾ. ಹಂಪನಾ ಅವರ ಪರಿಶ್ರಮ ಸಾಧನೆ ಮೆಚ್ಚುವಂತಹದ್ದು. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಡಾ. ಚೆನ್ನಿ ಹೇಳಿದರು.



ಖ್ಯಾತ ಕವಿ, ನಿವೃತ್ತ ಪ್ರಾಧ್ಯಾಪಕರಾದ **ಡಾ. ಎಚ್. ಎಸ್. ಶಿವಪ್ರಕಾಶ**ರವರು ಡಾ. ಹಂಪನಾರವರ ಕೃತಿಯ ಬಗ್ಗೆ ತಮ್ಮ ವಿಚಾರ ಮಂಡಿಸುತ್ತ, ಇದರ ತಾತ್ಪರ್ಯವನ್ನು ಈಗಾಗಲೇ ಡಾ. ಬಿಳಿಮಲೆಯವರು ವಿಸ್ತೃತವಾಗಿ ತಿಳಿಸಿದ್ದಾರೆ. ಈ ಕೃತಿಯು ಸಾಹಿತ್ಯ ಚರಿತ್ರೆಯನ್ನು ಬರೆಯುದಕ್ಕೆ ಒಂದು ಹೊಸ ಮಾದರಿಯಾಗಿದೆ. ಹೊಸ ಸಾಹಿತ್ಯ ಚಿಂತನೆಯಾಗಿದೆ. ಈ ಕೃತಿಯ ಮೊದಲ ಬಿಡುಗಡೆ ಆದದ್ದು ಬೆಂಗಳೂರಿನಲ್ಲಿ. ಆನಂತರ ಲಂಡನ್‌ನಲ್ಲಿಯೂ ಬಿಡುಗಡೆಯಾಗಿದೆ. ಇದರಲ್ಲಿ ಕನ್ನಡ ಭಾಷೆಯ ಸ್ಥಳೀಯತೆ, ವಿಶ್ವಾತ್ತಮ ಸಂಬಂಧ, ಗೋಳೀಕರಣ, ವಾಣಿಜೀಕರಣ, ಮನಸ್ಸುಗಳ ಐಕ್ಯತೆಯ ಬಗ್ಗೆ ವಿಶ್ಲೇಷಿಸಲಾಗಿದೆ. ಕನ್ನಡತನವನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ ನಮ್ಮ ಗುರುಗಳು. ಈಗಿನ ಸಮಯದಲ್ಲಿ ಕನ್ನಡ ಚಲನಚಿತ್ರದಲ್ಲಿ ಟಿವಿ ವಾಹಿನಿಗಳಲ್ಲಿ ಬಳಸುವ ಕನ್ನಡ–Convent Standard ತರಹ ಭಾಷೆಯಾಗಿದೆ ಎಂಬ ಆತಂಕ ಇದೆ. ಇಂತಹ ಕಾಲಘಟ್ಟದಲ್ಲಿ ಒಂದು ಅನನ್ಯ ಕೃತಿ ಡಾ. ಹಂಪನಾರವರಿಂದ ಮೂಡಿ ಬಂದಿದೆ. There is a paradigm shift in his work ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಸಂಬಂಧಗಳನ್ನು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ. ಜೈನಧರ್ಮ ಕನ್ನಡಕ್ಕೆ ಭಾರತಕ್ಕೆ, ವಿಶ್ವಕ್ಕೆ ಸಾಹಿತ್ಯಕವಾಗಿ ಅತೀ ಹೆಚ್ಚು ಕೊಡುಗೆಯನ್ನು ಕೊಟ್ಟಿದೆ. ಅನೇಕ ಕಾಲಘಟ್ಟಗಳ ಹಲವಾರು ಕವಿಗಳ ಹಾಗು ಅವರ ಕೃತಿಗಳ ಅವಲೋಕನ ಡಾ. ಹಂಪನಾ ಮಾಡಿದ್ದಾರೆ. ಅವರು ಸಾರ್ಕ್ ಸಂಸ್ಥೆಯಿಂದ ಭಾರತ ದೇಶದ ಪರವಾಗಿ ಸಾಹಿತ್ಯ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಅವರಿಗೆ ನನ್ನ ಅಭಿನಂದನೆಗಳು ಎಂದು ಹೇಳಿ ತಮ್ಮ ವಿಚಾರ ಮಂಡನೆ ಮುಗಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಂಡಾಯ ಸಾಹಿತಿ, ಕವಿ, ನಾಟಕಕಾರ ಹಾಗು ಮಾನ್ಯ ರಾಜ್ಯಸಭಾ ಸದಸ್ಯರಾದ **ಡಾ. ಎಲ್. ಹನುಮಂತಯ್ಯ**ನವರು ಮಾತನಾಡಿ, ದೆಹಲಿ ಕರ್ನಾಟಕ ಸಂಘವು ಇಂತಹ ಒಂದು ಅಪರೂಪದ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ. ಹಂಪನಾ ಎಲ್ಲರಿಗೂ ಮಹಾಗುರುಗಳು ಹಾಗೂ ತಮಗೆ ಅತ್ಯಂತ ಆತ್ಮೀಯ ಗುರುಗಳಾಗಿದ್ದಾರೆ. ಹೆಚ್ಚು ವಿದ್ವಾಂಸರಿಗೆ ಬೆನ್ನು ತಟ್ಟಿ ಪ್ರೋತ್ಸಾಹ ನೀಡಿರುವ ಮಹಾ ಮಹೋಪಾಧ್ಯಾಯರು ಅವರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಈಗಿನ ಸಮಯದಲ್ಲಿ ಬಹಳ ಇಂಗ್ಲಿಷ್ ಪ್ರಾಧ್ಯಾಪಕರಿಗೆ ಇಂಗ್ಲೀಷ್ ಕಷ್ಟ ಮತ್ತು ಸರಿಯಾಗಿ ಬರಲ್ಲ, ಕನ್ನಡ ಪಂಡಿತರಿಗೆ ಕನ್ನಡ

ಕಷ್ಟ. ಶಾಸ್ತ್ರೀಯ ಭಾಷೆಯ ಸಂಸ್ಥೆಯು ಮಾಡಬೇಕಾದ ಕೆಲಸವನ್ನು ಒಬ್ಬ ವ್ಯಕ್ತಿಯಾಗಿ ತುಂಬಾ ಶ್ರದ್ದೆಯಿಂದ ಡಾ. ಹಂಪನಾ ಮಾಡಿದ್ದಾರೆ. ಶಾಸ್ತ್ರೀಯ ಪಠ್ಯಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡಿರುವುದು ಒಂದು ಸಾಮಾನ್ಯ ಕೆಲಸವಲ್ಲ ಅಪ್ರತಿಮ ಸಾಧನೆ. ಅವರು ಯೋಗ್ಯರಲ್ಲಿ ಯೋಗ್ಯರು. ಅತ್ಯಂತ ಯೋಗ್ಯರಿಗೆ ಸಾರ್ಕ್ ಸಾಹಿತ್ಯ ಪ್ರಶಸ್ತಿ ದೊರಕಿರುವುದು ಹೆಮ್ಮೆಯ ವಿಷಯ. ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ತಮಿಳು ಭಾಷೆಯವರು ತಮ್ಮ ಭಾಷೆಯಲ್ಲಿ ಮಾಡಿರುವ ಬಹುಮುಖಿ ಕೆಲಸಗಳನ್ನು ನೋಡುವ ಅವಕಾಶವಿತ್ತು. ನಮ್ಮ ಕನ್ನಡ ಭಾಷೆಯಲ್ಲಿಯೂ ಅಂತಹ ಕೆಲಸಗಳು ನಡೆಯಬೇಕಾಗಿವೆ. ಈ ನಿಟ್ಟಿನಲ್ಲಿ ಡಾ. ಹಂಪನಾರವರು ಜಾಗತಿಕ ಮಟ್ಟವನ್ನು ಮುಟ್ಟುವಂತೆ ಕನ್ನಡ ಕೃತಿಯನ್ನು ಇಂಗ್ಲಿಷಿಗೆ ಅನುವಾದ ಮಾಡಿ ಹೊರತಂದಿರುವುದು ಶ್ಲಾಘನೀಯ ಅವರಿಗೆ ಅಭಿನಂದನೆಗಳನ್ನು ಹೇಳ ಬಯಸುತ್ತೇನೆ ಎಂದರು.

ವಿಚಾರ ಸಂಕಿರಣದ ಕೇಂದ್ರ ಬಿಂದುವಾಗಿ ಗೌರವ ಉಪಸ್ಥಿತರಿದ್ದ ಡಾ. ಹಂಪ ನಾಗರಾಜಯ್ಯನವರು ಮಾತನಾಡಿ ಈ ಕೃತಿ ತಮ್ಮ ಸುಮಾರು 60 ವರ್ಷಗಳ ಸಾಧನೆಯ ಸಂಗ್ರಹರೂಪವಾಗಿ ಮೂಡಿ ಬಂದಿದೆ. ಕನ್ನಡ ಭಾಷೆಯ ಸಾಹಿತ್ಯ ಚರಿತ್ರೆಯನ್ನು ಜಾಗತಿಕ ಮಟ್ಟದಲ್ಲಿ ಮುಟ್ಟಿಸುವ, ಮತ್ತಷ್ಟು ಎತ್ತರಕ್ಕೆ ಏರಿಸುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ಸುಮಾರು 1400 ಪುಟಗಳ ಈ ಐದು ಸಂಪುಟಗಳ ಕೃತಿ ಇದು. It is an original work, not a translate. ಈ ಕೃತಿ ಬಗ್ಗೆ ಇಂದು ದೆಹಲಿ ಕರ್ನಾಟಕ ಸಂಘದಲ್ಲಿ ವಿಚಾರ ಸಂಕಿರಣ ನಡೆಯುತ್ತಿರುವುದು ತಮಗೆ ಅತ್ಯಂತ ಸಂತೋಷ ತಂದಿದೆ. ಕನ್ನಡವನ್ನು, ಕರ್ನಾಟಕವನ್ನು ರಾಷ್ಟ್ರಮಟ್ಟದಲ್ಲಿ ವಿಶ್ವಮಟ್ಟದಲ್ಲಿ ಬಿಂಬಿಸುವ ಕೆಲಸವನ್ನು ಇತ್ತೀಚೆಗಷ್ಟೆಯೇ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರು ದೇಶದ ಪ್ರಧಾನಿಗಳನ್ನು ಕರೆಯಿಸಿ ರಾಷ್ಟ್ರ ರಾಜಧಾನಿಯಲ್ಲಿ ಒಂದು ಉತ್ತಮವಾದ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದಾರೆ. ಅವರಿಗೆ ಮತ್ತು ಅವರ ಕಾರ್ಯಕಾರಿ ಸಮಿತಿಗೆ ಅಭಿನಂದನೆಗಳು.

ಜಗತ್ತಿನಲ್ಲಿ ಅತೀ ದೊಡ್ಡ ಸಾಹಿತ್ಯ ಕನ್ನಡ ಸಾಹಿತ್ಯ. ನಾನು ಕನ್ನಡ ಸಾಹಿತ್ಯದ ಮೂರು ಕವಿಗಳನ್ನು ಹೆಚ್ಚು ಪ್ರಶಂಶಿಸುತ್ತೇನೆ. ಅವರೆಂದರೆ ವಾಲ್ಮೀಕಿ, ವ್ಯಾಸ ಹಾಗು ಕಾವ್ಯಕವಿ ಕಾಳಿದಾಸ. ಹಾಗೇನೇ ಮೊದಲ ಕವಯತ್ರಿ 7ನೇ ಶತಮಾನದ ವಿಜಿಕ ವಿಜಯಾಂಬಿಕ ಕನ್ನಡದವಳು. ಅವಳ ಸ್ವಾಭಿಮಾನ ಆತ್ಮಾಭಿಮಾನವನ್ನು ನಾನು ಮೆಚ್ಚುತ್ತೇನೆ ಎಂದರು

ತಮಗೆ ಈ ಕೃತಿಯನ್ನು ಇಂಗ್ಲಿಷ್‌ನಲ್ಲಿ ಬರೆಯಲು ಪ್ರೇರಣೆ ದೊರಕಿದ್ದು ತಾವು ಪ್ರಪಂಚಾದ್ಯಂತ ಪ್ರವಾಸ ಮಾಡಿದ ನಂತರವೇ. ಲಂಡನ್‌ನಲ್ಲಿ ತಿರುವಳ್ಳರ್‌ರವರ ಐದು ಅಡಿ ಪ್ರತಿಮೆ ಪ್ರತಿಷ್ಠಾಪನೆಯಾಗಿದೆ, ಪೋಲೆಂಡ್‌ನ ರಾಜಧಾನಿ ವಾರ್ಸ (Warsaw)ದ ವಿವಿಯಲ್ಲಿ ಎರಡು ತಮಿಳು ಪ್ರೊಫೆಸರ್ ಇದ್ದಾರೆ. ತಮಿಳು ಕೃತಿ ತಿರುಕ್ಕುರಳ್ ವಿಶ್ವದ 168 ಭಾಷೆಗಳಿಗೆ ಅನುವಾದಗೊಂಡಿದೆ.ಕನ್ನಡದ ಒಬ್ಬ ಕವಿಯ ಪ್ರತಿಮೆ ಎಲ್ಲಿಯೂ ನೋಡಲು ಹೊರದೇಶಗಳಲ್ಲಿ ತಮಗೆ ಸಿಗಲಿಲ್ಲ. ಇವನೆಲ್ಲ ನೋಡಿದ ನಂತರ ಇನ್ನು ನಮ್ಮ ಕನ್ನಡ ಸಾಹಿತ್ಯದಲ್ಲಿನ ಉತ್ತಮ ಕೆಲಸವನ್ನು ಜಗತ್ತಿನಾದ್ಯಂತ ಪರಿಚಯಿಸುವ, ಕನ್ನಡ ಭಾಷೆಯನ್ನು ಇನ್ನೂ ಎತ್ತರಕ್ಕೆ ಏರಿಸುವಂತಹ ಕೆಲಸವನ್ನು ಮಾಡಬೇಕೆಂಬ ಹಂಬಲ ತಮಗೆ ಮೂಡಿತ್ತು. ಅವರ ಫಲವೇ ತಮ್ಮ ಈ ಕೃತಿ ಎಂದರು. ತಮ್ಮ ಮಾತುಗಳಲ್ಲಿ ಆದಿಕವಿ ಪಂಪನ ಬಗ್ಗೆ ಹಾಗೂ ಅವನ ಚರಿತ್ರೆಯ ವಿವರಗಳನ್ನು ಡಾ. ಹಂಪನಾ ತಿಳಿಸಿದರು. Pampa can sit with any of the poets in the World. Pampa was a great traveller, a great singer. ಪಂಪ ಮೂಲತಃ ಈಗಿನ ತೆಲಂಗಾಣದ ಕರೀಂನಗರ ಜಿಲ್ಲೆಯ ಕುರ್ಕ್ಯಾಲ ಹಳ್ಳಿಯವನು. ಪಂಪ ಕನ್ನಡದ ಆದಿ ಕವಿಯಾದರೆ ಅವನ ತಮ್ಮ ಜಿನವಲ್ಲಭ ತೆಲುಗಿನಲ್ಲಿ ಆದಿಕವಿ. ಜಿನವಲ್ಲಭ ಸಂಸ್ಕೃತ, ಪ್ರಾಕೃತ ಮತ್ತು ತೆಲುಗಿನಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾನೆ. ಶಾಸನಗಳನ್ನು ಪ್ರತಿಷ್ಠಾಪನೆ ಮಾಡಿದ್ದಾನೆ. ಅಣ್ಣನ ಹೆಸರಿನಲ್ಲಿ ಕೆರೆ, ಉದ್ಯಾನವನಗಳನ್ನು ನಿರ್ಮಿಸಿದ್ದಾನೆ. ಅಣ್ಣ ತಮ್ಮಂದಿರ ಜೋಡಿ ಅವರಲ್ಲಿದ್ದ ಪರಸ್ಪರ ಅವಿನಾಭಾವ ಸಂಬಂಧ ಮೆಚ್ಚುವಂತಹದ್ದು ಎಂದರು.

ಹಾಗೇನೇ ಕನ್ನಡದ ಎರಡು ಮಹಾಕವಿಗಳ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದರು. 10 ನೇ ಶತಮಾನದ ಮಹಾಕವಿ ಪಂಪನಾದರೆ, 20ನೇ ಶತಮಾನದ ಮಹಾಕವಿ ಕುವೆಂಪು. ಇವರ ಕೃತಿಗಳು, ಸಾಹಿತ್ಯ ಲೋಕದಲ್ಲಿ ಮಾಡಿದ ಸಾಧನೆ ಅಪರಿಮಿತ. ಹಾಗೆಯೇ ಆಂಗ್ಲ ಕವಿಗಳಾದ Sherdon Pollock, Firdhoshi ಮುಂತಾದವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈಗ ಕನ್ನಡವನ್ನು ದೊಡ್ಡದಾಗಿ ವಿಶ್ವದಲ್ಲಿ ಬಿಂಬಿಸಬೇಕಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಬೇಕಾಗಿದೆ. ಇಂಗ್ಲಿಷಿನಲ್ಲಿ ಹೊರತಂದ ತಮ್ಮ ಕೃತಿಯನ್ನು ಇಲ್ಲಿನ ವೇದಿಕೆಯ ಮೇಲೆ ಉಪಸ್ಥಿತರಿರುವ ಕನ್ನಡ ಸಾಹಿತ್ಯ ಲೋಕದ ದಿಗ್ಗಜರು, ಹಿರಿಯ ಸಾಹಿತಿಗಳು ತಮ್ಮ ಈ ಪ್ರಯತ್ನಕ್ಕೆ ಮೆಚ್ಚುಗೆ ಸೂಚಿಸುವುದು ತಮಗೆ ಅತ್ಯಂತ ಸಂತೋಷವಾಗಿದೆ ಹಾಗು ತಾವು ಮಾಡಿದ ಕಾರ್ಯ ಸಾರ್ಥಕವಾಯಿತು. ಇಂದು ಇಲ್ಲಿ ಕಾರ್ಯಕ್ರಮ ಆಯೋಜನೆ ಮಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಹಾಗೂ ಇಂದು ಸಂಜೆ ದೆಹಲಿಯಲ್ಲಿ ಪ್ರತಿಕೂಲ ಹವಾಮಾನದ ನಡುವೆಯೂ ಉತ್ತಮ ಸಂಖ್ಯೆಯಲ್ಲಿ ಭಾಗವಹಿಸಿರುವ ದೆಹಲಿ ಕನ್ನಡಿಗರಿಗೆ ತಮ್ಮ ಅಭಿನಂದನೆಗಳು ಹಾಗು ಧನ್ಯವಾದಗಳನ್ನು ಸಮರ್ಪಿಸುತ್ತೇನೆ ಎಂದು ಹೇಳಿದರು.



ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ **ಶ್ರೀ ಸಿ.ಎಂ. ನಾಗರಾಜ**ರವರು ಮಾತನಾಡಿ ನಾವು ಸಂಘದ ಈ ಅಮೃತ ಮಹೋತ್ಸವ ವರ್ಷಾಚರಣೆಯ ಅಂಗವಾಗಿ ಹಲವಾರು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಇಡೀ ವರ್ಷ ಆಯೋಜಿನೆ ಮಾಡಿದ್ದೆವು. ಕಳೆದ ಫೆ. 25 ರಂದು ನಮ್ಮ ದೇಶದ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ನಮ್ಮ ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ಆಗಮಿಸಿ 'ಬಾರಿಸು ಕನ್ನಡ ಡಿಂಡಿಮವ' ಸಾಂಸ್ಕೃತಿಕ ಸಂಭ್ರಮವನ್ನು ಉದ್ಘಾಟಿಸಿ, ಕನ್ನಡ ಭಾಷೆ, ಕರ್ನಾಟಕ ರಾಜ್ಯ ಹಾಗೂ ಕನ್ನಡಿಗರನ್ನು ಹಾಡಿ ಹೊಗಳಿದ್ದಾರೆ. ಅದೊಂದು ಅಭೂತಪೂರ್ವ ಐತಿಹಾಸಿಕ ಕಾರ್ಯಕ್ರಮವಾಗಿತ್ತು. ದೆಹಲಿ ಕರ್ನಾಟಕ ಸಂಘವನ್ನು ತಮ್ಮ ಭಾಷಣದಲ್ಲಿ ಹಲವಾರು ಬಾರಿ ಉಲ್ಲೇಖಿಸುತ್ತಾ, ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿ, ಎಲ್ಲರಿಗೂ ಅಮೃತ ಮಹೋತ್ಸವದ ಅಭಿನಂದನೆಗಳನ್ನು ತಿಳಿಸಿದ್ದರು. ಹಾಗೇನೇ ಮುಂದಿನ 25 ವರ್ಷಗಳಲ್ಲಿ ಹೆಚ್ಚು ಹೆಚ್ಚು ಸಾಹಿತ್ಯಿಕ ವಿಚಾರ ಸಂಕಿರಣಗಳನ್ನು ಆಯೋಜಿಸಲು, ಕನ್ನಡಿಗರ ಮಕ್ಕಳಿಗೆ ಮತ್ತು ಕನ್ನಡೇತರರಿಗೆ ಕನ್ನಡ ಕಲಿಯಿರಿ, ಕನ್ನಡ ಕಲಿಸಿರಿ ಎಂಬ ಸ್ಪೂರ್ತಿ ಸಂದೇಶವನ್ನು ನೀಡಿದ್ದಾರೆ. ಕಲೆ ಮತ್ತು ಕಲಿಕೆಗೆ ಒತ್ತು ನನೀಡಿ ಸಂಘವು ಮುಂದುವರಿಯಬೇಕೆಂಬ ಸಲಹೆಯನ್ನು ಕೊಟ್ಟಿರುತ್ತಾರೆ. ಆ ನಿಟ್ಟಿನಲ್ಲಿ ನಮ್ಮ ಸಂಘದಲ್ಲಿ ಏರ್ಪಡಿಸಿದ ಈ ವಿಚಾರ ಸಂಕಿರಣ ಒಂದು ಸಮಯೋಚಿತ ಹಾಗೂ ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಎಂದರು.

ಡಾ. ಹಂಪನಾರವರು ಇಂಗ್ಲಿಷ್‌ನಲ್ಲಿ ಹೊರತಂದಿರುವ ಐದು ಸಂಪುಟಗಳ ಉತ್ತಮವಾದ ಈ ಕೃತಿ ನಮ್ಮ ಕನ್ನಡ ಭಾಷೆ, ಸಾಹಿತ್ಯ ಮತ್ತು ಕವಿಗಳ ವಿವರಗಳನ್ನು ಒಳಗೊಂಡ ಒಂದು ವಿಶ್ವಕೋಶದ ಮಾದರಿಯಾಗಿ ಮೂಡಿ ಬಂದಿದೆ. ಇದರ ಪ್ರಯೋಜನವನ್ನು ನಮ್ಮ ನಾಡಿನ, ದೇಶದ ಹಾಗೂ ವಿಶ್ವದಾದ್ಯಂತ ನೆಲೆಸಿರುವ ಸಮಸ್ತ ಕನ್ನಡಿಗರು ಪಡೆದುಕೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ಕನ್ನಡವನ್ನು ಕರ್ನಾಟಕವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ. ಈ ದಿಸೆಯಲ್ಲಿ ನಮ್ಮ ದೆಹಲಿ ಕರ್ನಾಟಕ ಸಂಘವು ಕನ್ನಡದ ರಾಯಭಾರಿಯಾಗಿ ಕೆಲಸ ಮಾಡುತ್ತಿದೆ. ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಲಿದೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಸಾಹಿತ್ಯಿಕ ಕಾರ್ಯಕ್ರಮಗಳು ಆಯೋಜನೆಗೊಳ್ಳಲಿವೆ ಎಂದರು. ಈ ಸಂದರ್ಭ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ವೇದಿಕೆಯಲ್ಲಿ ಆಯೋಜನೆಗೊಂಡ ಸಾಹಿತ್ಯ ಸಂವಾದ ಕಾರ್ಯಕ್ರಮವನ್ನು ನೆನಪಿಸಿಕೊಂಡರು. ಇಂದು ನಮ್ಮೊಡನೆ ಗೌರವ ಉಪಸ್ಥಿತರಿದ್ದು ನಮ್ಮ ಈ ಕಾರ್ಯಕ್ರಮದಲ್ಲಿ ಭಾಗಿಯಾದ ಡಾ. ಹಂಪನಾರವರು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರಿಗೆ ಈ ವರ್ಷ ಸಾರ್ಕ್ ಅವಾರ್ಡ್ ಫಾರ್ ಲಿಟರೇಚರ್ ದೊರಕಿದ್ದು ಸಮಸ್ತ ಕನ್ನಡಿಗರಿಗೆ ಸಂದ ಗೌರವ. ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಈ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾಗಿರುವ ಸಂದರ್ಭ ಹಾಗು ತಮ್ಮ ಕೃತಿಯನ್ನು ಹೊರತಂದು ಕನ್ನಡಿಗರ ಹೆಸರನ್ನು ವಿಶ್ವಮಟ್ಟದಲ್ಲಿ ಎತ್ತಿ ಹಿಡಿದಿರುವುದಕ್ಕೆ ಹಾರ್ದಿಕ ಅಭಿನಂದನೆಗಳನ್ನು ಮತ್ತು ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಹಾಗೇನೇ ಈ ಕಾರ್ಯಕ್ರಮದಲ್ಲಿ ಭಾಗಿಯಾದ ಮುಖ್ಯ ಅತಿಥಿಗಳಿಗೆ, ತಮ್ಮ ವಿಚಾರ ಮಂಡನೆ ಮಾಡಿದ ಸಾಹಿತ್ಯ ಲೋಕದ ದಿಗ್ಗಜರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಮತ್ತು ಆಗಮಿಸಿದ ಎಲ್ಲ ದೆಹಲಿ ಕನ್ನಡಿಗರಿಗೆ ಅಭಿನಂದನೆಗಳು ಎಂದರು.

ವಿಚಾರ ಸಂಕಿರಣದ ಅಂತಿಮ ಘಟದಲ್ಲಿ ಡಾ. ಹಂಪನಾರವರಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು. ಸಾರ್ಕ್ ಪ್ರಶಸ್ತಿಯನ್ನು ಅವರ ಪರವಾಗಿ ಈ ಮೊದಲು ಸ್ವೀಕರಿಸಿದ ಡಾ. ಬಿಳಿಮಲೆಯವರು ಅವರಿಗೆ ಹಸ್ತಾಂತರಿಸಿದರು ಇದೇ ಸಂದರ್ಭ ಡಾ. ಎಲ್. ಹನುಮಂತಯ್ಯ, ಡಾ. ಎಚ್. ಎಸ್. ಶಿವಪ್ರಕಾಶ್, ಡಾ. ರಾಜೇಂದ್ರ ಚೆನ್ನಿಯವರನ್ನು ಅಭಿನಂದಿಸಲಾಯಿತು. ಅಮೃತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಕಾರಣಾಂತರಗಳಿಂದ







**ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಅಮೃತ ಮಹೋತ್ಸವ ವರ್ಷಾಚರಣೆ ಹಿನ್ನೆಲೆ ಗೌರವ ಸಮರ್ಪಣೆ**

**ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ ಅಮೃತ ಮಹೋತ್ಸವ ವರ್ಷಾಚರಣೆ ಹಿನ್ನೆಲೆ ಗೌರವ ಸಮರ್ಪಣೆ**

ಅನಪಸ್ಥಿತರಿದ್ದ ಸಂಘದ ಮಾಜಿ ಅಧ್ಯಕ್ಷರುಗಳಾದ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರನ್ನು ಅವರು ಸಂಘಕ್ಕೆ ನೀಡಿದ ಸೇವೆ ಮತ್ತು ಮಾಡಿದ ಸಾಧನೆಗಳನ್ನು ನೆನಪಿಸಿಕೊಂಡು ಹಿರಿಯ ಸಾಹಿತಿಗಳ ಸಮ್ಮುಖದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅತಿಥಿಗಳನ್ನು, ಹಿರಿಯ ಕವಿಗಳು, ಸಾಹಿತಿಗಳನ್ನು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದ ದೆಹಲಿ ಕನ್ನಡಿಗರಿಗೆ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ವಂದನಾರ್ಪಣೆ ಅರ್ಪಿಸಿದರು.

ವಿಚಾರ ಸಂಕಿರಣದಲ್ಲಿ ಹಿರಿಯ ದೆಹಲಿ ಕನ್ನಡಿಗರಾದ ಡಾ. ಅಹಲ್ಯಾಚಿಂತಾಮಣಿ, ಶ್ರೀಮತಿ ರೇಣುಕಾ ನಿಡಗುಂದಿ, ಶ್ರೀಮತಿ ಸರೋಜ ಮಾಧವ, ಡಾ. ವಿಶ್ವನಾಥ, ಶ್ರೀ ಎನ್.ಎ. ಮಾಧವ, ಶ್ರೀಮತಿ ಮತ್ತು ಶ್ರೀ ಸೋಮನಾಥ ಬಿರಾದಾರ, ಶ್ರೀಹರಿ ಶೇಖರ್, ಶ್ರೀ ಮಹೇಶ್ ಕೋಳಿವಾಡ, ಶ್ರೀ ರಾಮಚಂದ್ರ ಉಭಾಳೆ, ಶ್ರೀ ಅರವಿಂದ ಬಿಜ್ಜೈ, ಶ್ರೀ ನಾಗರಾಜ ಎಂ, ಶ್ರೀ ಡಿ.ವಿ.ಎಸ್. ಮೂರ್ತಿ ಹಾಗು ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿ, ಶ್ರೀ ಅಮರೇಶ್ವರ ಪಾಟೀಲ್, ಪ್ರೊ. ಜಯಕುಮಾರ್ ಉಪಾಧ್ಯ, ಶ್ರೀ ಅರುಣ್ ಸಿ.ಎಸ್. ಮತ್ತಿತರರು ಪಾಲ್ಗೊಂಡಿದ್ದರು. ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ, ಶ್ರೀ ಸಂತೊಷ ಜೆ ಸದಸ್ಯೆಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ ಹಾಗು ಹಲವಾರು ದೆಹಲಿ ಕನ್ನಡಿಗರು ಉಪಸ್ಥಿತರಿದ್ದು, ಶ್ರೀ ಎನ್.ಪಿ. ಚಂದ್ರಶೇಖರರವರ ಸಮರ್ಪಕ ನಿರೂಪಣೆಯಿಂದ ಕಾರ್ಯಕ್ರಮ ಯಶಸ್ವಿಯಾಯಿತು.

***ಅಭಿಮತ ವರದಿ***

## ಅಭಿನಂದನೆ



ದೇಶ ವಿದೇಶಗಳಲ್ಲೂ ತಮಟೆ ವಾದ್ಯವನ್ನು ಜನಪ್ರಿಯಗೊಳಿಸಿದ **ಪದ್ಮಶ್ರೀ ಪುರಸ್ಕೃತ ಹೆಮ್ಮೆಯ ಕನ್ನಡಿಗ ಶ್ರೀ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ಅವರಿಗೆ** ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 30.03.2023 ರಂದು ಗೌರವಿಸಿ ಸನ್ಮಾನಿಸಲಾಯಿತು.

ಕಲಾವಿದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ಅವರಿಗೆ ರಾಷ್ಟ್ರಪತಿಗಳಿಂದ ಪದ್ಮಶ್ರೀ ದೊರೆತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.



ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರಾದ ಡಿ. ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಪುತ್ರ ಶ್ರೀ ಎಸ್. ಶ್ರೀನಾಥ್ ಅವರನ್ನು ಅಮೃತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಗೌರವಿಸಿ ಸನ್ಮಾನಿಸಿದ ಸಂದರ್ಭ



ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಹಿರಿಯ ಸದಸ್ಯ ಶ್ರೀ ವಿ.ವಿ. ಬಿರಾದಾರ ಅವರನ್ನು ಅಮೃತ ಮಹೋತ್ಸವ ಸಮಾರಂಭದಲ್ಲಿ ಅಭಿನಂದಿಸುತ್ತಿರುವುದು

# ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ಪರಿಸರದಲ್ಲಿ ಮಾನ್ಯ ಪ್ರಧಾನಮಂತ್ರಿಯವರನ್ನು ಅಮೃತ ಮಹೋತ್ಸವ ಸಮಾರಂಭಕ್ಕೆ 101 ಕುಂಭ ಕಳಸದೊಂದಿಗೆ ಶಾಸ್ತ್ರೋಕ್ತವಾಗಿ ಸ್ವಾಗತಿಸಿದ ಹೆಮ್ಮೆಯ ನಗುಮೊಗದ ದೆಹಲಿ ಕನ್ನಡತಿಯರು









ಶ್ರೀಮತಿ ಮಧು ಉಮಚಗಿ, ಶ್ರೀಮತಿ ಆಶಾ ಮಹದೇವ್, ಶ್ರೀಮತಿ ಭಾರತಿ ತಿಮ್ಮಪ್ಪ, ಶ್ರೀಮತಿ ಬೃಂದಾ ಸಂತೋಷ್, ಶ್ರೀಮತಿ ಕಿರಣ ಭಟ್, ಶ್ರೀಮತಿ ಶಾಲಿನಿ ಭಟ್, ಶ್ರೀಮತಿ ದೀಪಾ ಶಿವಪ್ಪ, ಶ್ರೀಮತಿ ಆರಾಧನ ಕೆ.ಸಿ., ಶ್ರೀಮತಿ ಬಬಿತಾ ಜೈನ್, ಶ್ರೀಮತಿ ದಿವ್ಯಶ್ರೀ, ಶ್ರೀಮತಿ ಜಯಶೀಲ ವೈ.ಜೆ., ಶ್ರೀಮತಿ ಸರೋಜ, ಶ್ರೀಮತಿ ಮಂಜುಳಾ ಹೂಗಾರ, ಶ್ರೀಮತಿ ನಂದಿನಿ ಲಿಂಗರಾಜು, ಶ್ರೀಮತಿ ಪಾರ್ವತಿ ಉಭಾಳೆ, ಶ್ರೀಮತಿ ಸಂಗೀತ ಲದ್ದೆ, ಶ್ರೀಮತಿ ಶೋಭಾ ತೇಲಿ, ಶ್ರೀಮತಿ ಶ್ರುತಿ ರಮೇಶ್, ಶ್ರೀಮತಿ ಶ್ರೀದೇವಿ ಸತೀಶ್, ಶ್ರೀಮತಿ ಸುನೀತಾ ರಾಘವೇಂದ್ರ, ಶ್ರೀಮತಿ ಸುಜಾತ ಆಚಾರ್ಯ, ಡಾ. ರೂಪಶ್ರೀ ಅಶೋಕ್, ಶ್ರೀಮತಿ ಪ್ರೇಮಲತಾ, ಶ್ರೀಮತಿ ಗೀತಾ ರೆಡ್ಡಿ, ಶ್ರೀಮತಿ ಪ್ರಿಯಾ ರಾವ್, ಶ್ರೀಮತಿ ಭುವನೇಶ್ವರಿ ಶರಣ, ಶ್ರೀಮತಿ ಅನಿತಾ ಪ್ರಭಾಕರ್, ಶ್ರೀಮತಿ ನಿರ್ಮಲಾ ನಾಗೇಶ್, ಶ್ರೀಮತಿ ಪ್ರಿಯಾಂಕ ಪಾಟೀಲ್, ಶ್ರೀಮತಿ ಪುಷ್ಪ ಕೃಷ್ಣಪ್ಪ, ಕು. ನಿತ್ಯಶ್ರೀ ಅಶೋಕ್, ಶ್ರೀಮತಿ ಸುಪ್ರಿಯ ಗೌಡ, ಶ್ರೀಮತಿ ವಿನುತ ಹೊಳ್ಳ, ಶ್ರೀಮತಿ ಜಮುನಾ ಸಿ. ಮಠದ, ಶ್ರೀಮತಿ ಜಯಶ್ರೀ ಬಸವರಾಜ, ಶ್ರೀಮತಿ ಅಶ್ವಿನಿ, ಶ್ರೀಮತಿ ನಯನಾ ಮಾನಕಪುರೆ, ಶ್ರೀಮತಿ ರೇಣುಕಾ ಸಾವ್‌ಕರ್, ಶ್ರೀಮತಿ ಶೀಲಾ ಆನಂದ್, ಶ್ರೀಮತಿ ಜ್ಯೋತಿ ರಾವ್, ಶ್ರೀಮತಿ ಕಲ್ಪನಾ ದೇಶಪಾಂಡೆ, ಶ್ರೀಮತಿ ಕವಿತಾ ಕಟ್ಟೀಮನಿ, ಶ್ರೀಮತಿ ಭಾರ್ಗವಿ ಸತೀಶ್, ಶ್ರೀಮತಿ ಜಗದೇವಿ ಹಿರೇಮಠ, ಶ್ರೀಮತಿ ಪವಿತ್ರ, ಶ್ರೀಮತಿ ಸಂಗೀತ, ಶ್ರೀಮತಿ ಸರೋಜಾ, ಶ್ರೀಮತಿ ಸುಜಾತ ಮೂರ್ತಿ., ಶ್ರೀಮತಿ ಲಕ್ಷ್ಮೀ ಕಿಣಿ, ಶ್ರೀಮತಿ ಲಲಿತಾ ಗೋಸಾಲ್, ಶ್ರೀಮತಿ ಜಯಲಕ್ಷ್ಮೀ ರಾಜಕುಮಾರ್, ಶ್ರೀ ರೇಖಾ ನಾಯಕ್, ಶ್ರೀಮತಿ ಸುಷ್ಮಾ ರಾವ್, ಶ್ರೀಮತಿ ಉಷಾ ಮೋಹನ್, ಶ್ರೀಮತಿ ಮಾಲಾ ಎ.ಎಚ್., ಶ್ರೀಮತಿ ಮಮತಾ ಶಿವರಾಮ್, ಶ್ರೀಮತಿ ಮೀನಾ ವಸಂತ್, ಶ್ರೀಮತಿ ಮೀತಾ ಮಿಶ್ರಾ, ಶ್ರೀಮತಿ ನಂದಿನಿ ಮಲ್ಯ, ಶ್ರೀಮತಿ ಸುಜಾತ ನಾಯಕ್, ಶ್ರೀಮತಿ ಜ್ಯೋತಿ ರಾಧಾಕೃಷ್ಣ, ಶ್ರೀಮತಿ ಉಷಾ ಬಿರಾದಾರ, ಶ್ರೀಮತಿ ಮಾಯಾ ರಾವ್, ಶ್ರೀಮತಿ ಮೈಥಿಲಿ ಅಟ್ಟಾವರ್, ಶ್ರೀಮತಿ ನಾಗಮಣಿ, ಶ್ರೀಮತಿ ನಳಿನಾ ಲವ, ಶ್ರೀಮತಿ ನಯನಾ ಭಟ್, ಶ್ರೀಮತಿ ನಿವೇದಿತಾ ಭಟ್, ಶ್ರೀಮತಿ ಪದ್ಮಾ ಕಲ್ಲಪ್ಪ., ಶ್ರೀಮತಿ ಪ್ರೇರಣಾ ವೆಂಕಟೇಶ್, ಶ್ರೀಮತಿ ಪ್ರಿಯದರ್ಶಿನಿ ಮರಿಬಸಪ್ಪ., ಶ್ರೀಮತಿ ಪೂರ್ಣಿಮಾ ಗೌಡ, ಶ್ರೀಮತಿ ಶಾಲಿನಿ ರಾವ್, ಶ್ರೀಮತಿ ರತ್ನ, ಶ್ರೀಮತಿ ರೀನಾ ಕುರ್ಮೋಲಿ, ಶ್ರೀಮತಿ ರೇಖಾ ಮೇಟಿ, ಶ್ರೀಮತಿ ಸವಿತಾ ಎಂ. ಭಟ್, ಶ್ರೀಮತಿ ಸವಿತಾ ಇನಾಮದಾರ್, ಶ್ರೀಮತಿ ಶಕುಂತಲಾ, ಶ್ರೀಮತಿ ಪ್ರೇಮಾ ಗೌಡ, ಶ್ರೀಮತಿ ಶಾಂತಾ ಶ್ರೀನಿವಾಸ, ಶ್ರೀಮತಿ ಶಿವ್‌ನಂದ್ ಘಾಲೆ, ಶ್ರೀಮತಿ ಶ್ರೀಲಕ್ಷ್ಮೀ ಚಂದ್ರಶೇಖರ್, ಶ್ರೀಮತಿ ಸುಜಾತ ನಿಂಬಾಳ್, ಶ್ರೀಮತಿ ಸುನಂದಾ ದರ್ಗಾ, ಶ್ರೀಮತಿ ಸುನಿತಾ ತಳವಾರ್, ಶ್ರೀಮತಿ ಸ್ವಾತಿ ಭಟ್, ಶ್ರೀಮತಿ ವನಿತಾ ಸುಧೀರ್, ಶ್ರೀಮತಿ ವಿದ್ಯಾ ಭಟ್, ಶ್ರೀಮತಿ ವಿಮಲಾ ನಾಯ್ಕ್, ಶ್ರೀಮತಿ ವಿಮಲಾ ರಂಗನಾಥ್, ಶ್ರೀಮತಿ ವಿನುತಾ ಗೌಡ, ಶ್ರೀಮತಿ ಜ್ಯೋತಿ ಮಂಜುಗೌಡ, ಶ್ರೀಮತಿ ಹರ್ಷಿತಾ ಕೊಕ್ಕಡ, ಶ್ರೀಮತಿ ಪವಿತ್ರಾ ತಮಣ್‌ಕರ್, ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸುಮಿತಾ ಮುರಗೋಡ, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ರೂಪಶ್ರೀ, ಶ್ರೀಮತಿ ಶ್ವೇತಾ, ಶ್ರೀಮತಿ ಶುಭಾ ದೇವಿಪ್ರಸಾದ್. ಈ ಎಲ್ಲಾ ಗೌರವಾನ್ವಿತ ಮಹಿಳೆಯರಿಗೆ ಹಾರ್ದಿಕ ಅಭಿನಂದನೆಗಳು.













SHRI. NARENDRA MODIJI


# ದೆಹಲಿ ಕರ್ನಾಟಕ ಸಂಘದ ಅಮೃತಮಹೋತ್ಸವ ಸಮಾರೋಪ

## ಸಮಾರಂಭದಲ್ಲಿ ಅನಾವರಣಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳ ವಿಸ್ತೃತ ವಿವರ

ಫೆಬ್ರವರಿ 25 ಮತ್ತು 26, 2023 ರಂದು, ನವದೆಹಲಿಯ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ವೇದಿಕೆಯಲ್ಲಿ ಯಶಸ್ವಿಯಾಗಿ ಆಯೋಜನೆಗೊಂಡ 'ಬಾರಿಸು ಕನ್ನಡ ಡಿಂಡಿಮವ' ಸಾಂಸ್ಕೃತಿಕ ಸಂಭ್ರಮದಲ್ಲಿ ಕರ್ನಾಟಕ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಪ್ರಸಿದ್ಧ ಕಲಾ ತಂಡಗಳ ಕಲಾವಿದರು ತಮ್ಮ ಪ್ರತಿಭೆಯನ್ನು ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಕನ್ನಡಿಗರ ಮುಂದೆ ಪ್ರದರ್ಶಿಸಿದರು.

ಫೆ. 25ರ ಬೆಳಿಗ್ಗೆ ಕರ್ನಾಟಕ ಸರ್ಕಾರದ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನೀಲ್ ಕುಮಾರ್‌ರವರಿಂದ ಆಗಮಿಸಿದ್ದ ಕಲಾ ತಂಡಗಳ ಮುಖ್ಯಸ್ಥರು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಸಮ್ಮುಖದಲ್ಲಿ ದೀಪ ಬೆಳಗುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳು ಚಾಲನೆಗೊಂಡವು. ಮೊದಲಿಗೆ ಜಾನಪದ ಜೀವಧ್ವನಿ ಡಾ. ಕೆ. ರಾಮೇಶ್ವರಪ್ಪ ಮತ್ತು ಅವರ ತಂಡದ ಒಟ್ಟು 14 ಕಲಾವಿದರಿಂದ ವೈವಿಧ್ಯಮಯ ಜಾನಪದ ಗೀತೆಗಳ ಗಾಯನ ಪ್ರಸ್ತುತಿಯಾಯಿತು.

ಮೈಸೂರಿನ ಪ್ರಖ್ಯಾತ ಇತಿಹಾಸಕಾರ ಶ್ರೀ ಧರ್ಮೇಂದ್ರ ಕುಮಾರ್ ಅವರಿಂದ ಕರ್ನಾಟಕದ ರಾಜ ಮನೆತನಗಳ ಇತಿಹಾಸ ವೈಭವ ಕುರಿತು ಕಥೆ ಮೂಲಕ ಮಾಹಿತಿ ಹಾಗು ಮತ್ತು ಶ್ರೀಮತಿ ಬಿ ರಶ್ಮಿ ಮತ್ತು ತಂಡದವರಿಂದ ನೃತ್ಯ ಪ್ರದರ್ಶನವಾದವು. ಬೆಂಗಳೂರಿನ ಡಾ. ಎಂ.ಎಲ್. ಶಿವಶಂಕರ್‌ರವರ ಎಂಡೇವರ್ಸ್ ಶಾಲೆಯ 26 ಮಕ್ಕಳಿಂದ ಜೋಗದ ಸಿರಿ ಬೆಳಕಿನಲ್ಲಿ ಹಾಡಿನ ನೃತ್ಯ ರೂಪಕ ಪ್ರದರ್ಶಿಸಲಾಯಿತು. ಡಾ. ಶುಭಾಂಗಿಯವರ ನಿರ್ದೇಶನದಲ್ಲಿ ಅವರ ತಂಡದ ಹತ್ತು ಕಲಾವಿದೆಯರಿಂದ ಶಿವೋಹಂ ನೃತ್ಯ ರೂಪಕ ಪ್ರಸ್ತುತಿಗೊಂಡಿತು.

ನಂತರ ಶ್ರೀ ಮಾಲೂರು ವಿ.ಜಿ. ನೇತೃತ್ವದ ರಂಗ ವಿಜಯ ಕಲಾತಂಡದ 34 ಕಲಾವಿದರಿಂದ ಜ್ಞಾನಪೀಠ ಸಂಗಮ ರೂಪಕ ಪ್ರಸ್ತುತಿಯಾಯಿತು. ನಿರಂತರ ಸ್ಕೂಲ್ ಆಫ್ ಆರ್ಟ್ಸ್ ಡ್ಯಾನ್ಸ್ ತಂಡದವರು ನೃತ್ಯ ರೂಪಕ ಪ್ರದರ್ಶನ ಮಾಡಿದರು. ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಶಾಲೆಯ ಸುಮಾರು ಇನ್ನೂರಕ್ಕೂ ಹೆಚ್ಚು ಮಕ್ಕಳು ವಿವಿಧ ಸಾಂಸ್ಕೃತಿಕ ಪ್ರದರ್ಶನ ನೀಡಿದರು. ಸಂಜೆ ನಡೆದ ಅಮೃತ ಮಹೋತ್ಸವ ಉದ್ಘಾಟನೆ ಕಾರ್ಯಕ್ರಮ ಸಂದರ್ಭ ದೇಶದ ಮಾನನೀಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿ, ನಾಡಿನ ಜಗದ್ಗುರುಗಳು ಕರ್ನಾಟಕದ ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಕೇಂದ್ರ ಮಂತ್ರಿ ಶ್ರೀ ಪ್ರಹ್ಲಾದ್ ಜೋಶಿ, ಸಮಾರಂಭದ ಗೌರವಾಧ್ಯಕ್ಷ ಶ್ರೀ ಸಿಟಿ ರವಿ, ಸಚಿವ ಶ್ರೀ ಸುನಿಲ್ ಕುಮಾರ್, ಕೇಂದ್ರದ ಸಂಸದರು, ರಾಜ್ಯದ ಶಾಸಕರು ಸಚಿವರು, ಗಣ್ಯಾತಿ ಗಣ್ಯರ ಹಾಗೂ ನೆರೆದಿದ್ದ ಸುಮಾರು ಮೂರು ಸಾವಿರ ಕನ್ನಡಿಗರ ಸಮ್ಮುಖದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ಪ್ರಸ್ತುತಿಗೊಂಡವು.

ಮಾನ್ಯ ಪ್ರಧಾನ ಮಂತ್ರಿಗಳು ನಗಾರಿ ಬಾರಿಸುವುದರ ಮೂಲಕ ಕಾರ್ಯಕ್ರಮಗಳ ವಿಧ್ಯುಕ್ತ ಉದ್ಘಾಟನೆ ಮಾಡಿದರು.

ಮೊದಲಿಗೆ ಸ್ಥಳೀಯ ಹತ್ತು ದೆಹಲಿ ಕನ್ನಡಿಗ ಮಹಿಳೆಯರು ನಾಡಗೀತೆ. 'ಜಯಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ'ಯನ್ನು ಹಾಡಿದರು. ನಾಡಗೀತೆ ಹಾಡಿದ ಸಮಯ ಪ್ರಧಾನಿಯವರ ಸಹಿತ ಎಲ್ಲರೂ ಎದ್ದು ನಿಂತು ತಾಯಿ ಭುವನೇಶ್ವರಿಗೆ ಗೌರವ ಸಲ್ಲಿಸಿದರು. ನಾಡ ಗೀತೆಗೆ ಧ್ವನಿಯಾದ ಕನ್ನಡಿಗ ಮಹಿಳೆಯರು : ಶ್ರೀಮತಿ ಪೂಜಾ ರಾವ್, ಶ್ರೀಮತಿ ಸುಮಿತಾ ಮುರಗೋಡ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀಮತಿ ಶೋಭಾ ನಾಗರಾಜ, ಶ್ರೀಮತಿ ದೀಪಾ ಶಿವಪ್ಪ, ಶ್ರೀಮತಿ ರೂಪಶ್ರೀ ನರಸಿಂಹಮೂರ್ತಿ, ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಶ್ರೀಮತಿ ವನಿತಾ ಸುಧೀರ್. ನಂತರ ಪ್ರಧಾನಿಯವರ ಸಮ್ಮುಖದಲ್ಲಿ ಪ್ರಸ್ತುತಿಗೊಂಡ ಆಯ್ದ ಸಾಂಸ್ಕೃತಿಕ ಕಾರ್ಯಕ್ರಮಗಳು :

1. 'ಕರುನಾಡ ನಾಟ್ಯ ಝೇಂಕಾರ ಪ್ರಧಾನಮಂತ್ರಿಗಳಿಗೆ ನಮಸ್ಕಾರ'–ಗುರು ಡಾ. ಜಯಲಕ್ಷ್ಮೀರವರ ನೇತೃತ್ವದ ಕೈಲಾಸ ಕಲಾಧರ ತಂಡದ 5 ಕಲಾವಿದೆಯರಿಂದ.
2. 'ಮೇರಿ ಧರತಿ ಮುಜಸೇ ಪೂಚ್ ರಹೀಹೈ' ಈಸ್ ದೇಶ್ ಮೈ ಮಿಟಾನೇದೂಂಗ, ಈ ದೇಶ್ ಮೈ ಜುಕನೇ ದೂಂಗ–ನೃತ್ಯ ರೂಪಕ (10 ಕಲಾವಿದರಿಂದ)
3. ವಿದ್ವಾನ್ ಕೆ. ರಮೇಶ್ ತಂಡದ 10 ಕಲಾವಿದೆಯರಿಂದ 'ವರಾಹ ರೂಪಂ' ನೃತ್ಯರೂಪಕ.
4. ಕರ್ನಾಟಕ ಜನಪದ ಕಲಾದರ್ಶನ–ಕೆ. ನಾಗರಾಜ್ ಮತ್ತು ತಮಟೆ ಮಂಜುನಾಥ್ ತಂಡದ 50 ಕ್ಕೂ ಹೆಚ್ಚು ಜಾನಪದ ಕಲಾವಿದರಿಂದ ಕಹಳೆ, ತಮಟೆ, ಡೋಲು, ನಗಾರಿ, ನಂದಿಧ್ವಜ, ಸೋಮನಕುಣಿತ, ನವಿಲುಕುಣಿತ, ಕೋಳಿ ಕುಣಿತ ಮುಂತಾದ ಜಾನಪದ ವೈವಿಧ್ಯ
5. ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ 11 ಮಕ್ಕಳ ಕಲಾವಿದರಿಂದ–ಸಿಂಹ ನೃತ್ಯ
6. ಆಳ್ವಾಸ್ ತಕ್ಷಣ ಪ್ರತಿಷ್ಠಾನದ 15 ಕಲಾವಿದೆಯರಿಂದ ವಂದೇ ಮಾತರಂ–ಕಥಕ್ ನೃತ್ಯ ಶೈಲಿಯಲ್ಲಿ ಸಮೂಹ ನೃತ್ಯ. ನಂತರ ಮಾನ್ಯ ಪ್ರಧಾನಿಯವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಶ್ರೀ ಜ್ಞಾನೇಂದ್ರ ಮತ್ತು ಶ್ರೀಮತಿ ಸವಿಪ್ರಕಾಶ್ ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು.

ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂದುವರಿದವು ಗೋಕಾಕ್‌ನಿಂದ ಬಂದ ಶ್ರೀ ಪ್ರವೀಣ್ ಗಸ್ತಿಯವರು ತಮ್ಮ ಮಾತುಗಳಲ್ಲಿ ಅನುಭವವನ್ನು ಹಚ್ಚಿಕೊಂಡರು. ಝೀ ಕನ್ನಡ ಟಿವಿ ವಾಹಿನಿ ಕಾಮಿಡಿ ಕಿಲಾಡಿಗಳು ಖ್ಯಾತಿ ಶ್ರೀ ಅಪ್ಪಣ್ಣನವರ ಸಾರಥ್ಯದಲ್ಲಿ ಎಲ್ಲಾ ನಾಲ್ಕು ಸೀಸನ್ ನ ಕಲಾವಿದರಿಂದ ಹಾಸ್ಯ ಸಂಜೆ ಪ್ರಸ್ತುತಿಗೊಂಡು ನೆರೆದಿದ್ದ ಕನ್ನಡಿಗರನ್ನು ನಕ್ಕು ನಗಿಸಿದರು. ಸಣ್ಣವರಿದ್ದಾಗ ಹಣ್ಣು ಕೊಡ್ತಾರೆ, ದೊಡ್ಡವರಿದ್ದಾಗ ಹೆಣ್ಣು ಕೊಡ್ತಾರೆ ಸತ್ತಾಗ ಮಣ್ಣು ಕೊಡ್ತಾರೆ ಎಂದು ಹೇಳುತ್ತಾ ಶ್ರೀ ಅಪ್ಪಣ್ಣ ಹಾಸ್ಯ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ನಾಟಕ ಕಂಪನಿಯೊಂದಕ್ಕೆ ಕಲಾವಿದರನ್ನು ಸೆಲೆಕ್ಟ್ ಮಾಡಲು ಕಲಾವಿದರ ಆಡಿಷನ್ ಬಗ್ಗೆ ಹಾಸ್ಯಮಯ ಸ್ಕಿಟ್ ಸಭಿಕರನ್ನು ನಗೆಯಲ್ಲಿ ತೇಲಾಡಿಸಿತು. ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್‌ನ ವಿಜೇತೆ ಕು. ಬೃಂದಾರವರಿಂದ ವಿಕ್ರಾಂತರೋಣ ಚಿತ್ರದ ಹಾಡು ರಾರಾ ರಕ್ಕಮ್ಮ ಎಕ್ಕಸಕ್ಕ ಎಕ್ಕಸಕ್ಕಾ ನೃತ್ಯ ಪ್ರದರ್ಶನವಾಯಿತು. ನಂತರ ಕಾಮಿಡಿ ಕಿಲಾಡಿಗಳು ತಂಡದ ಐದು ಕಲಾವಿದರಿಂದ–ಎರಡನೇ ಹಾಸ್ಯ ಸ್ಕಿಟ್ ಪ್ರಸ್ತುತಿಗೊಂಡಿತು. ಹಾಸ್ಯ ಕಾರ್ಯಕ್ರಮದ ನಂತರ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಮೂಹದ ಒಟ್ಟಾರೆ 150 ಕಲಾವಿದ ಮಕ್ಕಳಿಂದ 'ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡ ವೈವಿಧ್ಯ ಕಾರ್ಯಕ್ರಮಗಳು : ಶಾಸ್ತ್ರೀಯ ನೃತ್ಯ–ಭರತನಾಟ್ಯ ವಿದ್ವಾನ್ ದೀಪಕ್ ಕುಮಾರ್‌ರವರ ನಿರ್ದೇಶನದ




ಡಾ. ಶುಭಾಂಗಿ ತಂಡದವರಿಂದ ಶಿವೋಹಂ ನೃತ್ಯರೂಪಕ




ಕೊಡಗಿನ ಶ್ರೀ ತಮ್ಮಯ್ಯ ತಂಡದವರಿಂದ ಉಮ್ಮತ್ತಾಟ ನೃತ್ಯ

ಯಕ್ಷಗಾನ, ನವದುರ್ಗೆಯರ ನೃತ್ಯರೂಪಕ, ಮಣಿಪುರಿ, ಗುಜರಾತಿನ ದಾಂಡಿಯಾ ನೃತ್ಯ, ಸಮೂಹ ಸ್ಟಿಕ್ ಡ್ಯಾನ್ಸ್ ಪ್ರೇಕ್ಷಕರ ಮನಸೂರೆಗೊಂಡವು

ಅನಂತರ, ಕುಶಾಲನಗರದ ಕುಂದಣ ನೃತ್ಯಾಲಯ ಕಲಾ ತಂಡದ ವಿ. ಡಾ. ವಿನುತಾ ಹೇಮಂತ್ ನಿರ್ದೇಶನದಲ್ಲಿ ಒಟ್ಟು 26 ಕಲಾವಿದೆಯರಿಂದ ಕೊಡಗಿನ ನೃತ್ಯರೂಪಕ, ಕಾವೇರಿ ನೃತ್ಯ ಪ್ರದರ್ಶನವಾಯಿತು.

ಬೆಂಗಳೂರಿನ ವಿ. ಲತಾ ಲಕ್ಷ್ಮೀಶ್ ಸಾರಥ್ಯದಲ್ಲಿ ಸಂಯೋಗ ಕಲಾ ತಂಡದ 10 ಕಲಾವಿದೆಯರಿಂದ ತಾಯಿ ಚಾಮುಂಡೇಶ್ವರಿ ಕುರಿತ ನೃತ್ಯರೂಪಕ ಪ್ರಸ್ತುತಿಗೊಂಡಿತು.

ವಿ. ಕೋಲಾರ್ ರಮೇಶ್‌ರವರ ತಂಡದ 9 ಕಲಾವಿದೆಯರಿಂದ–ಕೋಡಗಾನ ಕೋಳಿ ನುಂಗಿತ್ತಾ ನೃತ್ಯ ಪ್ರದರ್ಶನ ಮಾಡಲಾಯಿತು.

ಅನಂತರ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿವಂಗತ ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಪರವಾಗಿ ಅವರ ಸುಪುತ್ರ ಶ್ರೀ ಎಸ್. ಶ್ರೀನಾಥ್‌ರವರಿಗೆ ಗೌರವ ಸನ್ಮಾನ ಮಾಡಲಾಯಿತು.

ಛತ್ತೀಸ್‌ಗಢ ಕನ್ನಡ ಸಂಘದ, ಅಧ್ಯಕ್ಷರು, ಕಾರ್ಯದರ್ಶಿಗಳನ್ನು ಗೌರವಿಸಿ ಅಭಿನಂದಿಸಲಾಯಿತು.

ಸಭಾಗೃಹದ ವೇದಿಕೆಯಲ್ಲಿ ಪ್ರದರ್ಶನ ನೀಡಿದ ಎಲ್ಲ ಕಲಾತಂಡಗಳ ಕಲಾವಿದರಿಗೆ ಹಾಗೂ ಅವರ ಮುಖ್ಯಸ್ಥರಿಗೆ ಕರ್ನಾಟಕ ಸಂಘದ ಪರವಾಗಿ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪ್ರಶಸ್ತಿಪತ್ರ ಮತ್ತು ಪದಕ ಪ್ರದಾನ ಮಾಡಿ ಗೌರವ ಸನ್ಮಾನ ಮಾಡಲಾಯಿತು.

**ದಿನಾಂಕ 26.02.2023ರಂದು ಪ್ರಸ್ತುತಿ ಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು**

1. ವಿದ್ವಾನ್ ಕೋಲಾರ ರಮೇಶ್ ಸಾರಥ್ಯದಲ್ಲಿ ವಿಧುಷಿ ತನುಜಾ ರಾವ್ ತಂಡದಿಂದ, ಭರತ ನಾಟ್ಯ ಮತ್ತು ಜಾನಪದ ಹಾಡಿನ ನೃತ್ಯ

2. ಕಲ್ಯಾಣ ಕರ್ನಾಟಕದ ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ ಶ್ರೀ ವಿಜಯಕುಮಾರ ಸೊನಾರೆ ಮತ್ತು ಕಾರ್ಯದರ್ಶಿ ಶ್ರೀ ಪ್ರಕಾಶ ಎಸ್. ಅಂಗಡಿ ಕನ್ನೇಳ್ಳಿ ಸಾರಥ್ಯದಲ್ಲಿ ಜಾನಪದ ಕಲಾವಿದರಿಂದ ವೈವಿಧ್ಯ ಕಾರ್ಯಕ್ರಮ.

ಶ್ರೀ ಬಾಲರಾಜ್ ಬೀದರ್ ತಂಡದವರಿಂದ ಚರಮ ವಾದ್ಯ. ಶ್ರೀ ಲಕ್ಷ್ಮಣ ಗುತ್ತೇದಾರ ತಂಡ ಯಾದಗೀರ್ ತಂಡ–ದುಂದುಮೆ ಹಾಡು. ಶ್ರೀ ನರಸಣ್ಣ ರಾಯಚೂರು ತಂಡದವರಿಂದ ರಂಗ ಪದ ಗಾಯನ

4. ಬೆಂಗಳೂರು ಸಂಯೋಗ ಕಲಾ ಶಾಲೆ ವಿ. ಲತಾ ಲಕ್ಷ್ಮೀಶ್ ತಂಡದಿಂದ ನೃತ್ಯ.

5. ಶ್ರೀ ಮಾಲೂರು ವಿಜಿ ರಂಗ ವಿಜಯ–ಕನ್ನಡದ ಕಲಿಗಳು ರೂಪಕ.

6. ಕುಶಾಲನಗರದ ಕುಂದಣ ನೃತ್ಯಾಲಯ ವಿ. ಡಾ. ವಿನುತಾ ಹೇಮಂತ್ ತಂಡದವರಿಂದ ಕೊಡಗಿನ ನೃತ್ಯ.

7. ನಂತರ ನಡೆದ ವರ್ತಮಾನದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ– ಕನ್ನಡದ ಸಾಹಿತಿಗಳನ್ನು ಖ್ಯಾತ ಕವಿಗಳು, ಲೇಖಕರು, ನಗೆ ಬರಹಗಾರರು, ಚಲನಚಿತ್ರ ನಿರ್ದೇಶಕರು, ಕವಯಿತ್ರಿ ಮತ್ತು ಲೇಖಕಿಯರು. ಪಾಲ್ಗೊಂಡಿದ್ದರು.

8. ಶ್ರೀ ಕೆರೆಮನೆ ಶಿವಾನಂದ ಹೆಗಡೆ ಯವರ ಇಡುಗುಂಜಿ ಮಹಾಗಣಪತಿ ಮೇಳದವರಿಂದ ಪಂಚವಟಿ ಯಕ್ಷಗಾನ ಪ್ರದರ್ಶನ.

9. ವಿ ಭಾನುಪ್ರಿಯ ತಂಡದವರಿಂದ ನೃತ್ಯ.

10. ಶ್ರೀ ರಮೇಶ್ ಮೇಸ್ತಾ ನೇತೃತ್ವದ ಓಷನ್ ಹಾರ್ಟ್ ಬ್ರೇಕರ್ಸ್ ತಂಡದವರಿಂದ ಗಾಯನ, ವೈವಿಧ್ಯ ನೃತ್ಯ ಪ್ರದರ್ಶನ.

11. ಕೊಡಗಿನ ಶ್ರೀ ತಮ್ಮಯ್ಯ ಸಾರಥ್ಯದಲ್ಲಿ ಫೀಲ್ಡ್ ಮಾರ್ಷಲ್ ಕಾರಿಯಪ್ಪ ತಂಡದ ಕಲಾವಿದರಿಂದ ಕೊಡಗಿನ ಹಾಡು, ನೃತ್ಯ, ಉಮ್ಮತ್ತಾಟ ಪ್ರದರ್ಶನ

12. ದೆ.ಕ. ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದ ಗೌರವಾಧ್ಯಕ್ಷರಾದ ಶ್ರೀ ಸಿ.ಟಿ. ರವಿಯವರು ಸಮಾರೋಪ ಮಾತುಗಳನ್ನಾಡಿ ಸಮಸ್ತ ದೆಹಲಿ ಕನ್ನಡಿಗರಿಗೆ, ಕರ್ನಾಟಕದ ವಿವಿಧ ಭಾಗಗಳಿಂದ ದೆಹಲಿಗೆ ಬಂದು ಈ ವೇದಿಕೆಯಲ್ಲಿ ಪ್ರದರ್ಶನ ನೀಡಿದ ಕಲಾವಿದರಿಗೆ ಅಭಿನಂದನೆ ಸಲ್ಲಿಸಿದರು. ಅವರಿಗೆ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಗೌರವ ಅಭಿನಂದನೆಯನ್ನು ಸಮರ್ಪಣೆ ಮಾಡಿದರು

13. ದೆಹಲಿ ಕರ್ನಾಟಕ ಸಂಘದಿಂದ ಸಂಘಕ್ಕೆ ಅಪರಿಮಿತ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರು, ಮಾಜಿ ಪ್ರಧಾನ ಕಾರ್ಯದರ್ಶಿಗಳಿಗೆ ಗೌರವ ಸಮರ್ಪಣೆ

14 ಹೊರನಾಡ ಮತ್ತು ಹೊರದೇಶಗಳ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ಗೌರವ ಸನ್ಮಾನ ಪ್ರದಾನ.

15. ಸಂಘಕ್ಕೆ ಅಪಾರ ಸೇವೆ ಮತ್ತು ಕೊಡುಗೆ ನೀಡಿದ ಹಿರಿಯ ದೆಹಲಿ ಕನ್ನಡಿಗರಿಗೆ ಗೌರವ ಸಮರ್ಪಣೆ.

16. ಸಂಘಕ್ಕೆ ಸಹಕಾರ ನೀಡಿದ ಕೊಡುಗೈ ದಾನಿಗಳು, ಕೈಜೋಡಿಸಿದ ಗಣ್ಯಾತಿ ಗಣ್ಯರಿಗೆ ಗೌರವ ಸನ್ಮಾನ ಪ್ರದಾನ

17. ಸಭಾಗೃಹ ವೇದಿಕೆಯಲ್ಲಿ ಪ್ರದರ್ಶನ ನೀಡಿದ ಕಲಾ ತಂಡದ ಮುಖ್ಯಸ್ಥರಿಗೆ, ಕಲಾವಿದರಿಗೆ ಪದಕ, ಮತ್ತು ಪ್ರಶಸ್ತಿ ಪತ್ರ ಪ್ರದಾನ, ಗೌರವ ಸಮರ್ಪಣೆ.

18. ಕನ್ನಡ ಚಿತ್ರರಂಗದ ಹೆಸರಾಂತ ಹಿನ್ನೆಲೆ ಗಾಯಕ ಶ್ರೀ ವಿಜಯ್ ಪ್ರಕಾಶ್ ಮತ್ತು ತಂಡದವರಿಂದ ಸಂಗೀತ ರಸ ಸಂಜೆ. ಶ್ರೀ ವಿಜಯ ಪ್ರಕಾಶ್ ರೊಂದಿಗೆ ಗಾಯಕಿಯರಾದ ಶಶಿಕಲಾ ಸುನಿಲ್,ಶಾಶ್ವತಿ, ಶಮಿತ ಮಲ್ನಾಡ್ ಮತ್ತು ಗಾಯಕ ನಿಖಿಲ್ ಪಾರ್ಥಸಾರಥಿರವರಿಂದ ಜನಪ್ರಿಯ ಕನ್ನಡ ಚಿತ್ರ ಗೀತೆ, ಭಾವಗೀತೆ ಜನಪದ ಗೀತೆ, ವಚನಗಳ ಹಾಗು ಜೈ ಹೋ ಹಿಂದಿ ಹಾಡಿನ ಸುಶ್ರಾವ್ಯ ಗಾಯನ, ಸಂಗೀತ ರಸ ಸಂಜೆಯಲ್ಲಿ ಪಾಲ್ಗೊಂಡ ಸಾವಿರಾರು ಪ್ರೇಕ್ಷಕರಲ್ಲಿ ಅತ್ಯಂತ ಜನಪ್ರಿಯವಾಯಿತು. ಸುಮಾರು 3 ಘಂಟೆಗಳ ಕಾಲ ಪ್ರಸ್ತುತಿಗೊಂಡ ಸಂಗೀತ ಕಾರ್ಯಕ್ರಮ ದೆಹಲಿ ಕನ್ನಡಿಗರಿಗೆ ಖುಷಿ ಮತ್ತು ಮುದ ನೀಡಿದವು. ಸುಮಧುರ ಹಾಡುಗಳ ತಾಳಕ್ಕೆ ಅವರು ಹೆಜ್ಜೆ ಹಾಕಿ, ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಅನಂತರ ಶ್ರೀ ವಿಜಯ ಪ್ರಕಾಶ್ ಮತ್ತು ತಂಡದವರಿಗೆ ಸನ್ಮಾನ, ಗೌರವ ಸಮರ್ಪಣೆ ಮಾಡಲಾಯಿತ.



**ಇತಿಹಾಸಕಾರ ಶ್ರೀ ಧರ್ಮೇಂದ್ರ ಕುಮಾರ್**

19. ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರಿಂದ ಪ್ರದರ್ಶನ

20. ಕೆ. ನಾಗರಾಜ್ ತಂಡದವರಿಂದ ಜಾನಪದ ವೈವಿಧ್ಯ ಪ್ರದರ್ಶನ

21. ವಿದ್ವಾನ್ ಕೋಲಾರ್ ರಮೇಶ್ ತಂಡದವರಿಂದ ನೃತ್ಯ, ದೆ.ಕ. ಸಂಘದ ಕುರಿತು ನೃತ್ಯರೂಪಕ, ಅಂತಿಮವಾಗಿ ವೇದಿಕೆ ಮೇಲೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಂದ ಎಲ್ಲ ಕಲಾವಿದರಿಗೆ ಸಮೂಹವಾಗಿ ಗೌರವ ಸನ್ಮಾನ ಸಮರ್ಪಣೆ ಮಾಡಿ ಅಭಿನಂದನೆ ಸಲ್ಲಿಸಲಾಯಿತು.

**ಅಭಿಮತ ವರದಿ**





**ನವದೆಹಲಿಯ ಬಸವ ಇಂಟರ್‌ನ್ಯಾಷನಲ್ ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ**






ವಿದುಷಿ ಭಾನುಪ್ರಿಯ ತಂಡದವರಿಂದ ನೃತ್ಯ

ವಿದುಷಿ ತನುಜಾ ರಾವ್ ತಂಡದಿಂದ ನೃತ್ಯ ಪ್ರದರ್ಶನ





ಶ್ರೀ ಮಾಲೂರು ವಿಜಯರವರ ನಿರ್ದೇಶನದಲ್ಲಿ ರಂಗ ವಿಜಯ ತಂಡದ ಕಲಾವಿದರಿಂದ ಜ್ಞಾನಪೀಠ ಸಂಗಮ ರೂಪಕ










ವಿದ್ವಾನ್ ಕೋಲಾರ ರಮೇಶ್ ತಂಡದ ಕಲಾವಿದೆಯರ ನೃತ್ಯ ಪ್ರದರ್ಶನ



ಬೆಂಗಳೂರಿನ ಡಾ. ಎಮ್.ಎಲ್. ಶಿವಶಂಕರ್‌ರವರ ಎಂಡೇವರ್ಸ್ ಶಾಲಾ ಮಕ್ಕಳಿಂದ ಜೋಗದ ಸಿರಿ ಬೆಳಕಿನಲ್ಲಿ ಹಾಡಿನ ನೃತ್ಯ ಪ್ರಸ್ತುತಿ







ಶ್ರೀ ಅಪ್ಪಣ್ಣನವರ ಸಾರಥ್ಯದಲ್ಲಿ ಝೀ ಟಿವಿ ವಾಹಿನಿಯ ಕಾಮಿಡಿ ಕಿಲಾಡಿಗಳಿಂದ ಹಾಸ್ಯ ಸ್ಕಿಟ್ ಮತ್ತು ಕಲಾವಿದರಿಗೆ ಗೌರವ ಸಮರ್ಪಣೆ




ಸಂಯೋಗ ಕಲಾ ತಂಡದವರಿಂದ ಚಾಮುಂಡೇಶ್ವರಿ ನೃತ್ಯರೂಪಕ




ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟದವರಿಂದ ಲಂಬಾಣಿ ನೃತ್ಯ




ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರ ಪ್ರದರ್ಶನ




ತಮಟೆ ನಾಗರಾಜ್ ತಂಡದವರಿಂದ ತಮಟೆ ವಾದನ







ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟದವರಿಂದ ಜಾನಪದ ವೈವಿಧ್ಯ–ದುಂದುಮೆ ಹಾಡು ಮತ್ತು ರಂಗ ಪದ ಗಾಯನ




ಶ್ರೀ ಕೆರೆಮನೆ ಶಿವಾನಂದ ಹೆಗಡೆಯವರ ಸಾರಥ್ಯದಲ್ಲಿ ಇಡಗುಂಜಿ ಮಹಾಗಣಪತಿ ಮೇಳದವರಿಂದ 'ಪಂಚವಟಿ ಯಕ್ಷಗಾನ ಪ್ರದರ್ಶನ

# ‘ಬಾರಿಸು ಕನ್ನಡ ಡಿಂಡಿಮವ’ ಸಾಂಸ್ಕೃತಿಕ ಕಾರ್ಯಕ್ರಮದ ಆಯ್ದ ಛಾಯಾ ಚಿತ್ರಗಳು




ವಿದುಷಿ ತನುಜಾ ರಾವ್ ತಂಡದಿಂದ ನೃತ್ಯ ಪ್ರದರ್ಶನ



ತನುಜಾ ರಾವ್ ತಂಡದವರಿಂದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರಿಗೆ ಹಸ್ತದಲ್ಲಿ ಬಿಡಿಸಿದ ಮೋದಿ ಅವರ ಚಿತ್ರಪಟವನ್ನು ನೀಡುತ್ತಿರುವುದು




ಶ್ರೀ ಮಾಲೂರು ವಿ.ಜಿ. ಅವರ ರಂಗವಿಜಯ ತಂಡದವರಿಂದ ಕರುನಾಡು ಕಲಿಗಳು ರೂಪಕ







ಹೊನ್ನಾವರದ ಓಷನ್ ಹಾರ್ಟ್ ಬ್ರೇಕರ್ಸ್ ಕಲಾವಿದರಿಂದ ನೃತ್ಯ ವೈವಿದ್ಯ



ವೇದಿಕೆಯಲ್ಲಿ ದೆಹಲಿ ಕನ್ನಡ ಮಹಿಳಾ ಮಣಿಗಳು

# ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ವೇದಿಕೆಯಲ್ಲಿ ಪ್ರದರ್ಶನಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳ ದೃಶ್ಯಗಳು




ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರು




ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರು




ಜಾನಪದ ಜೀವಧ್ವನಿ ಡಾ. ಕೆ. ರಾಮೇಶ್ವರಪ್ಪ ತಂಡದವರಿಂದ ಜಾನಪದ ಗಾಯನ



ಕಲ್ಯಾಣ ಕರ್ನಾಟಕ ಜಾನಪದ ಕಲಾವಿದರು




ವಿದ್ವಾನ್ ಕೋಲಾರ ರಮೇಶ್ ತಂಡದವರಿಂದ ನೃತ್ಯ ವೈವಿಧ್ಯ

## ‘ಬಾರಿಸು ಕನ್ನಡ ಡಿಂಡಿಮವ’ ಸಾಂಸ್ಕೃತಿಕ ಸಂಭ್ರಮದ ಅವಿಸ್ಮರಣೀಯ ದೃಶ್ಯಗಳು
















ಕಲಾವಿದರ ತಂಡದವರೊಂದಿಗೆ ವೇದಿಕೆಯ ಮೇಲೆ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರು ಸಂಭ್ರಮಿಸಿದ ಸಂದರ್ಭ



ಡಾ. ವಿನುತಾ ಹೇಮಂತ್ ನಿರ್ದೇಶನದ ಕುಶಾಲನಗರದ ಕುಂದಣ ನಾಟ್ಯಾಲಯ ಕಲಾವಿದೆಯರ ಕೊಡಗಿನ ನೃತ್ಯ



ಪ್ರಖ್ಯಾತ ಹಿನ್ನೆಲೆ ಗಾಯಕ ಶ್ರೀ ವಿಜಯ್ ಪ್ರಕಾಶ್ ಮತ್ತು ಸಂಗಡಿಗರಿಂದ ಸಂಗೀತ ಸಂಜೆ


### Statement of Ownership and other Particulars about
### Delhi Karnataka Sangha's ABHIMATA
### FORM-IV (See Rule 8)

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press,<br>B-303, Okhla Industrial Area, Phase-I,<br>New Delhi-110020 |
| **Publishers Name** | : | R. Renukumar |
| **Nationality** | : | Indian |
| **Address** | : | Delhi Karnataka Sangha<br>Rao Tularam Marg, Sector-12,<br>R.K. Puram, New Delhi - 110022 |
| **Editor's Name** | : | Chandrashekara N.P. |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha<br>Rao Tularam Marg, Sector-12<br>R.K. Puram, New Delhi- 110022 |

I, **R. Renukumar,** hereby declare that the particulars given above are true to the best of my knowledge and belief.

**09.04.2023**
**New Delhi**

**Sd\-**
**Publisher**



ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
April -2023, Vol. No.33, Issue No. 7, Price Rs.1/-
RNI Regn. No. 53405/91, DL-SW-01/4016/22-24
Date of Publication : April 8th / 9th, Posting Date : 10th / 11th, Total Pages-24, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

## 25.02.2023 ಮತ್ತು 26.02.2023 ರಂದು ನವದೆಹಲಿಯ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ಸಭಾಗೃಹದಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳ - ಆಯ್ದ ಛಾಯಾಚಿತ್ರಗಳು




















ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮಕ್ಕಳಿಂದ ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮ